ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಶನಿವಾರ, ಸೆಪ್ಟೆಂಬರ್ 16, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 125 RNI : 27369/75

janathavani@mac.com
www.janathavani.com
08192 254736 91642 99999

## ಸಂವಿಧಾನ ಪೀಠಿಕೆಗೆ ಮಳೆ ಸಿಂಚನ



ದಾವಣಗೆರೆ, ಸೆ. 15 - ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಳೆಯ ಸಿಂಚನದ ನಡುವೆ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ನೆರವೇರಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಿವಿಧ ಶಾಲೆಯ ಸಾವಿರಾರು ಮಕ್ಕಳು ಕ್ರೀಡಾಂಗಣದಲ್ಲಿ ನೆರೆದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಕಾರ್ಯಕ್ರಮದಲ್ಲಿ ನೆರೆದಿದ್ದವರಿಗೆ ಸಂವಿಧಾನದ ಪೀಠಿಕೆಯ ಶಪಥ ಬೋಧಿಸಲಾಯಿತು.

ಸಿದ್ದಗಂಗಾ ಶಾಲೆಯ ಮಕ್ಕಳು ಭಾರತ ಭೂಪಟದ ಆಕಾರದಲ್ಲಿ ನಿಲ್ಲುವ ಮೂಲಕ ಗಮನ ಸೆಳೆದರು. ಕೇಸರಿ, ಹಸಿರು ಹಾಗೂ ಬಿಳಿ ಬಣ್ಣದ ಫಲಕಗಳನ್ನು ಹಿಡಿದು ತ್ರಿವರ್ಣ ಧ್ವಜ ರೂಪಿಸಿ ಚಪ್ಪಾಳೆ ಗಿಟ್ಟಿಸಿದರು.

ಕಾರ್ಯಕ್ರಮ ಆರಂಭವಾಗುವ ಸಮಯಕ್ಕೆ ಸರಿಯಾಗಿ ತುಂತುರು ಮಳೆ ಆರಂಭವಾಗಿ, ನಂತರ ಬಿರುಸು ಪಡೆದುಕೊಂಡಿತು. ಆದರೆ, ಭಾರತದ ಭೂಪಟದ ಮಾದರಿ ರೂಪಿಸಿ ನಿಂತಿದ್ದ ವಿದ್ಯಾರ್ಥಿಗಳು ಕಾರ್ಯಕ್ರಮ ಪೂರ್ಣಗೊಳ್ಳುವವರೆಗೂ ಅಲುಗಾಡದೇ ನಿಂತಿದ್ದರು.

ಈ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಕಾರ್ಯಕ್ರಮದ ವೇಳೆ ಮಳೆ ಬಂದಿರುವುದು ಶುಭ ಸೂಚನೆ. ಮಳೆಯ ನಡುವೆಯೂ ಮಕ್ಕಳು ಶಿಸ್ತಿನಿಂದ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಂವಿಧಾನದ ಆಶಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ, ದೇಶ ಬೆಳೆಸುವ ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕು ಎಂದವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ಮೇಯರ್ ವಿನಾಯಕ ಪೈಲ್ವಾನ್, ಜಿಲ್ಲಾ ಪಂಚಾಯ್ತಿ ಸಿಇಒ ಸುರೇಶ್ ಇಟ್ನಾಳ್, (2ನೇ ಪುಟಕ್ಕೆ)

## ಭದ್ರಾ ನಾಲೆಗೆ ಆಫ್-ಆನ್ ಪದ್ಧತಿ

### ಭದ್ರಾ ಐಸಿಸಿಯಿಂದ ನೀರಿನ ನಿರ್ವಹಣೆ ಕುರಿತು ಮಧ್ಯಂತರ ತೀರ್ಮಾನ

ಮಲೇಬೆನ್ನೂರು, ಸೆ. 15- ಭದ್ರಾ ಜಲಾಶಯದಿಂದ ಅಚ್ಚುಕಟ್ಟಿನ ಮುಂಗಾರು ಬೆಳೆಗಳಿಗೆ ನಾಲೆಗಳಲ್ಲಿ ಹರಿಸುತ್ತಿದ್ದ ನೀರನ್ನು ಆಫ್ ಅಂಡ್ ಆನ್ ಪದ್ಧತಿಯಲ್ಲಿ ಹರಿಸಲು ತೀರ್ಮಾನಿಸಲಾಗಿದೆ ಎಂದು ಭದ್ರಾ ಅಧೀಕ್ಷಕ ಇಂಜಿನಿಯರ್ ಸುಜಾತ ಅವರು ಶುಕ್ರವಾರ ಅಧಿಸೂಚನೆ ಹೊರಡಿಸಿದ್ದಾರೆ.

ದಿನಾಂಕ 06-09-2023 ರಂದು ಮಲವಗೊಪ್ಪದಲ್ಲಿರುವ ಭದ್ರಾ ಕಾಡಾ ಕಛೇರಿಯಲ್ಲಿ ಭದ್ರಾ ಕಾಡಾ ಅಧ್ಯಕ್ಷರೂ ಆದ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ 83ನೇ ಭದ್ರಾ ಐಸಿಸಿ ಸಭೆಯ ತೀರ್ಮಾನದಂತೆ



2023-24 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ಮಧ್ಯಂತರ ನಿಲುಗಡೆಯೊಂದಿಗೆ ಸರದಿಯಲ್ಲಿ ನಾಲೆಗಳಲ್ಲಿ ನೀರು ಹರಿಸಲಾಗುವುದೆಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

**ಸೆ.16ರಿಂದ 10 ದಿನ ನೀರು ಬಂದ್**

**ನೀರಿನ ಹೊಸ ವೇಳಾಪಟ್ಟಿ :** ಬಲದಂಡೆ ನಾಲೆಗೆ ದಿನಾಂಕ 16-09-2023 ರಿಂದ 25-09-2023 ರವರೆಗೆ 10 ದಿನಸ ನೀರು ಹರಿಸಲಾಗುವುದು. ಮತ್ತೆ ದಿನಾಂಕ 26-09-2023 ರಿಂದ 15-10-2023 ರವರೆಗೆ 10 ದಿವಸ ನೀರು ಬಂದ್ ಮಾಡಿ, ದಿನಾಂಕ 26-10-2023 ರಿಂದ 17-11-2023 ರವರೆಗೆ 23 ದಿವಸ ನೀರು ಹರಿಸಲಾಗುವುದು. ಈ ವೇಳಾಪಟ್ಟಿ ಪ್ರಕಾರ ಬಲದಂಡೆ ನಾಲೆಗೆ ಬಿಟ್ಟು 20 ದಿವಸ ಬಂದ್ ಮಾಡಿ, 43 ದಿವಸ ಮಾತ್ರ ನೀರು ಹರಿಸಲಾಗುವುದು.

ಅದೇ ರೀತಿ ಎಡದಂತೆ ನಾಲೆಗೂ ನೀರಿನ ಹೊಸ ವೇಳಾಪಟ್ಟಿ ಮಾಡಲಾಗಿದ್ದು, ಈಗಾಗಲೇ ಹತ್ತು ದಿನ ನಾಲೆಯಲ್ಲಿ ನೀರು ಬಂದ್ ಮಾಡಿರುವುದರಿಂದ ದಿನಾಂಕ 17.9.2023ರಿಂದ 01.10.23ರವರೆಗೆ 15 ದಿನ ನೀರು ಹರಿಸಲಾಗುವುದು.

ದಿನಾಂಕ 2.10.23 ರಿಂದ 11.10.23 ರವರೆಗೆ ಹತ್ತು ದಿನ ನೀರು ಬಂದ್ ಮಾಡಿ ದಿನಾಂಕ 12.10.23ರಿಂದ (4ನೇ ಪುಟಕ್ಕೆ)

## ಸನಾತನ ಧರ್ಮದ ಅವಹೇಳನ ವಿಕೃತಿ

### ರಾಜಕೀಯದಲ್ಲಿ ಧರ್ಮದ ದುರ್ಬಳಕೆ ದೊಡ್ಡ ದುರಂತ: ಶ್ರೀ



> ಸನಾತನ ಧರ್ಮದ ಬಗ್ಗೆ ಸರಿಯಾದ ರೀತಿಯಲ್ಲಿ ತಿಳಿದುಕೊಳ್ಳದೆ ಮಾತನಾಡಿ, ವಿವಾದ ಸೃಷ್ಟಿ ಮಾಡುವುದು ಮತ್ತು ಜಾತಿಯ ಕಿಚ್ಚು ಹಚ್ಚಿ ಮನಸ್ಸನ್ನು ಕದಡುವಂತೆ ಮಾಡುವುದು ಸರಿಯಾದ ಬೆಳವಣಿಗೆಯಲ್ಲ. ಮನಸ್ಸಿನ ವಿವೇಚನಾ ಶಕ್ತಿಯನ್ನು ಸರಿಯಾಗಿ ಬಳಸದೇ ಇದ್ದರೆ ಇಂತಹ ಸನ್ನಿವೇಶಗಳು ಸೃಷ್ಟಿಯಾಗುತ್ತವೆ.
> - ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಹರಿಹರ, ಸೆ. 15 - ಸನಾತನ ಧರ್ಮದ ಬಗ್ಗೆ ಅವಹೇಳನ ಪದಗಳನ್ನು ಬಳಸಿ ಮಾತನಾಡುವವರು ವಿಕೃತ ಮನಸ್ಸಿನವರು. ಅವರ ಹೇಳಿಕೆಗಳಿಗೆ ಯಾರೂ ಮಾನ್ಯತೆ ಕೊಡಬಾರದು ಎಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಬೆಳ್ಳೂಡಿ ಗ್ರಾಮದ ಪಾಟೀಲ್ ಗುರುಬಸಪ್ಪ ಪ್ರೌಢಶಾಲಾ ಆವರಣದಲ್ಲಿ ನಡೆದ ತರಳಬಾಳು ಜಗದ್ಗುರು ಶ್ರೀ ಲಿಂಗೈಕ್ಯ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ 31 ನೇ ಶ್ರದ್ಧಾಂಜಲಿ ಸಮಾರಂಭಕ್ಕೆ ಹರಿಹರ ತಾಲ್ಲೂಕಿನಿಂದ ಭಕ್ತಿ ಸಮರ್ಪಣೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸನಾತನ ಧರ್ಮಕ್ಕೆ ಹಲವಾರು ವರ್ಷಗಳ ಇತಿಹಾಸ ಮತ್ತು ತನ್ನದೇ ಆದ ಶಕ್ತಿಯಿದೆ. ಧರ್ಮ ಎಂಬುದು ಒಳ್ಳೆಯದರ ಬಗ್ಗೆ ಧ್ವನಿ ಎತ್ತುವುದು. ಅನುಕಂಪ ಮತ್ತು ಮಾನವೀಯ ಮೌಲ್ಯಗಳನ್ನು ಹೊಂದಿರುವುದು. ವಿಕೃತ ಮನಸ್ಸನ್ನು ನಿವಾರಣೆ ಮಾಡುವುದೇ ಧರ್ಮವಾಗಿದೆ ಎಂದವರು ಹೇಳಿದರು.

ಇತ್ತೀಚೆಗೆ ಸನಾತನ ಧರ್ಮಕ್ಕೆ ಚ್ಯುತಿ ಆಗುವಂತೆ ಡೆಂಗ್ಯೂ, ಕೊರೊನ ಇಂತಹ ಪದಗಳನ್ನು ಬಳಸುತ್ತಿರುವವರು ಯೋಗ್ಯತೆ ಇಲ್ಲದವರು. ಧರ್ಮ ರಾಜಕೀಯದಲ್ಲಿ ದುರ್ಬಳಕೆ ಆಗುತ್ತಿರುವುದು (4ನೇ ಪುಟಕ್ಕೆ)

## ಭತ್ತ, ಕಬ್ಬು ಬಿತ್ತನೆ ಪ್ರದೇಶ ಹೆಚ್ಚಳ

ನವದೆಹಲಿ, ಸೆ. 15 – ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಭತ್ತ ಬೆಳೆಯುವ ಪ್ರದೇಶ ಶೇ.2.71ರಷ್ಟು ವಿಸ್ತರಣೆಯಾಗಿದ್ದು, 409.41 ಲಕ್ಷ ಹೆಕ್ಟೇರ್‌ಗೆ ತಲುಪಿದೆ. ಇನ್ನೂ ಕೆಲ ಪ್ರದೇಶಗಳಲ್ಲಿ ಬಿತ್ತನೆ ಮುಂದುವರೆದಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 398.58 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬಿತ್ತನೆಯಾಗಿತ್ತು.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಭತ್ತ ಹಾಗೂ ಕಬ್ಬಿನ ಬಿತ್ತನೆ ಹೆಚ್ಚಾಗಿದೆ. ಬೇಳೆ, ಖಾದ್ಯತೈಲ, ಸೆಣಬು ಹಾಗೂ ಹತ್ತಿಯ ಬಿತ್ತನೆ ಕಡಿಮೆಯಾಗಿದೆ. ಕಳೆದ ವರ್ಷ 127.57 ಲಕ್ಷ ಹೆಕ್ಟೇರ್ (2ನೇ ಪುಟಕ್ಕೆ)

## ಜಿಲ್ಲೆಯಲ್ಲಿ ಬರ-ನೆರವಿಗೆ ಕ್ರಮ



ದಾವಣಗೆರೆ, ಸೆ. 15 - ಬರದ ಹಿನ್ನೆಲೆಯಲ್ಲಿ ಸರ್ಕಾರದಿಂದ ನೆರವು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಿಯಮಗಳ ಪ್ರಕಾರ ದಾವಣಗೆರೆ ಜಿಲ್ಲೆಯನ್ನು ತೀವ್ರ ಬರ ಪೀಡಿತ ಎಂದು ಘೋಷಿಸಲಾಗಿದೆ ಎಂದರು.

ಅಣೆಕಟ್ಟೆಗೆ ನೀರು ಬರಬೇಕಿದೆ. ನಮ್ಮಲ್ಲಿ ಸಾಕಷ್ಟು ರೈತರು ಬಿತ್ತನೆ ಮಾಡಿದ್ದಾರೆ. ಈ (4ನೇ ಪುಟಕ್ಕೆ)


## ಅಭಿನಂದನೆಗಳು



ತಾಲ್ಲೂಕು ಗುತ್ತಿಗೆದಾರರ ಸಂಘದ ನಿರ್ದೇಶಕರಾಗಿ ಮತ್ತು ಯುವ ಕಾಂಗ್ರೆಸ್ ಸಮಿತಿ ದಾವಣಗೆರೆಯ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ
**ಶ್ರೀ ಅಮಿತ್ ಬಿ.ಜಿ. ಬಸವಾಪಟ್ಟಣ**
ಇವರಿಗೆ ಹೃದಯ ಪೂರ್ವಕ ಅಭಿನಂದನೆಗಳು.

ಶುಭ ಕೋರುವವರು : ವನಜಾಕ್ಷಮ್ಮ ಅಜ್ಜೆವಡೆಯರ ಮಠ
❖ ಡಾ. ಮೃತ್ಯುಂಜಯ್ ಎನ್. ಹಿರೇಮಠ
ಛೇರ್ಮನರ್ ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ದಾವಣಗೆರೆ.
❖ ಡಾ. ಮುಕ್ತಾ ಎಂ.ಹೆಚ್.
❖ ಅಳಿಯ : ಶ್ರೀ ಅಭಿಷೇಕ್ ❖ ಮಗಳು : ಶ್ರೀಮತಿ ಮೇಘನ
❖ ಮಗ : ಶುಶ್ರುತ ಮೊಮ್ಮಗಳು : ಕು. ಬನಶ್ರೀ
❖ ಶ್ರೀ ಬಿ.ಜಿ. ನಾಗರಾಜ ಬಸವಾಪಟ್ಟಣ ❖ ಶ್ರೀಮತಿ ಪುಷ್ಪಾ ಬಿ.ಜಿ.
❖ ಡಾ. ಸಿದ್ದಲಿಂಗೇಶ್ ಹಿರೇಮಠ, ಗುರುಶ್ರೀ ಆಸ್ಪತ್ರೆ.

## ಹೃದಯಪೂರ್ವಕ ಕೃತಜ್ಞತೆಗಳು



ಕರ್ನಾಟಕ ರಾಜ್ಯ ಆಯುಷ್ ಮೆಡಿಕಲ್ ಕಾಲೇಜುಗಳ B.A.M.S ಮತ್ತು PG ಕೋರ್ಸ್‌ಗಳ ಶುಲ್ಕ ನಿಗದಿ ಮಾಡಿ ತೀವ್ರ ಗತಿಯಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ ಅನುವು ಮಾಡಿಕೊಟ್ಟ ಕರ್ನಾಟಕ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಚಿವರಾದ ಸನ್ಮಾನ ಶ್ರೀಯುತ **ದಿನೇಶ್ ಗುಂಡೂರಾವ್** ಇವರುಗಳಿಗೆ ನಮ್ಮೆಲ್ಲರ ಹೃದಯಪೂರ್ವಕ ಕೃತಜ್ಞತೆಗಳು.

ಶುಭ ಕೋರುವವರು :
◆ ಡಾ. ಮೃತ್ಯುಂಜಯ್ ಎನ್. ಹಿರೇಮಠ
ಕರ್ನಾಟಕ ರಾಜ್ಯ ಆಯುಷ್ ಮೆಡಿಕಲ್ ಕಾಲೇಜುಗಳ ಮ್ಯಾನೇಜ್‌ಮೆಂಟ್ ಫೆಡರೇಷನ್, ಕಾರ್ಯದರ್ಶಿ
ಛೇರ್ಮನ್, ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ದಾವಣಗೆರೆ.
◆ ಶ್ರೀ ಅಶೋಕ ಬಾಗಮಾರ್, ಅಧ್ಯಕ್ಷರು
◆ ಶ್ರೀ ಜಿ.ಎಸ್. ಪಾಟೀಲ್, MLA, ರೋಣ
ಕರ್ನಾಟಕ ರಾಜ್ಯ ಆಯುಷ್ ಮೆಡಿಕಲ್ ಕಾಲೇಜುಗಳ ಮ್ಯಾನೇಜ್‌ಮೆಂಟ್ ಫೆಡರೇಷನ್, ಕಾರ್ಯಕಾರಿ ಮಂಡಳಿ, ಸದಸ್ಯರುಗಳು.

## ವಿದೇಶ ಪ್ರಯಾಣ- ಶುಭ ಹಾರೈಕೆಗಳು



ದಿನಾಂಕ : 16.09.2023
ಶನಿವಾರ ದಂದು
ಪ್ರಭುದೇವ ಗನ್ನಿ ಮರ್ಚೆಂಟ್ಸ್
ಮಾಲೀಕರಾದ
ಜಿ. ಕರಿಬಸಪ್ಪ
ಶ್ರೀಮತಿ ಕೆ. ಪುಷ್ಪಾ ಇವರ ತಮ್ಮ
ಜಿ. ನಾಗಪ್ಪ ಮತ್ತು
ಶ್ರೀಮತಿ ಎನ್. ಶಕುಂತಲಾ
ಇವರ ಮಗನಾದ
**ಎನ್. ಪ್ರಜ್ವಲ್**
ಇವರು ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿಗೆ ಎಂ.ಎಸ್. ಮಾಡಲು ಪ್ರಯಾಣ ಬೆಳೆಸುತ್ತಿರುವ ಇವರಿಗೆ ಶುಭ ಕೋರುವವರು...
ಆರ್. ಶಂಕ್ರಪ್ಪ, ಪ್ರಶಾಂತ್ ಗನ್ನಿ ಮರ್ಚೆಂಟ್ಸ್
ಆರ್. ಶಾಂತಮ್ಮ, ಆರ್. ಪ್ರಶಾಂತ್, ಪಿ. ಶುಭ
ವೀರೇಶ್ ಅಂಗಡಿ, ದಾನೇಶ್ವರಿ ಗನ್ನಿ ಮರ್ಚೆಂಟ್ಸ್, ಹಾವೇರಿ.
ಲಕ್ಷ್ಮೀ ಅಂಗಡಿ, ಹಾವೇರಿ.

## 9ನೇ ವರ್ಷದ ಚಿರಸ್ಮರಣೆ




**ಶ್ರೀ ಸೋಮರಾಯ ನಾರಾಯಣ ಕುರ್ಡೇಕರ್ (ಪಲ್ಲಾಗಟ್ಟಿ)**
ಶ್ರೀ ಸೋಮೇಶ್ವರ ಜ್ಯೂಯಲರಿ ಮಾರ್ಟ್
ಚೌಕಿಪೇಟೆ, ದಾವಣಗೆರೆ.
ಶ್ರೀ ಓಂಕಾರ ಗಣಪತಿ ಜ್ಯೂಯಲರಿ ಮಾರ್ಟ್
ಚೌಕಿಪೇಟೆ, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ತೋರಿಸಿದ ಹಾದಿಯಲ್ಲಿ ಮುನ್ನಡೆಯುತ್ತಿರುವ,
ಪತ್ನಿ : ಶ್ರೀಮತಿ ರಾಧಾಬಾಯಿ ಸೋಮರಾಯ ಕುರ್ಡೇಕರ್
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

## ತೃತೀಯ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಬಿ.ಎಸ್. ವೆಂಕಟೇಶ್‌ರವರು**
ಪ್ರಥಮ ದರ್ಜೆ ಸಹಾಯಕರು, ಮಹಾನಗರ ಪಾಲಿಕೆ, ದಾವಣಗೆರೆ.
ಜನನ : 16.01.1973 ಮರಣ : 16.09.2020
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಶ್ರೀಮತಿ ರುದ್ರಮ್ಮ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು
ಸೊಸೆಯಂದಿರು, ಅಳಿಯಂದಿರು
ಮಕ್ಕಳಾದ : ✦ ವಿನಯ್ ವಿ. (ಅಪ್ಪು) ✦ ಪ್ರೇರಣಾ ವಿ.
ಸಹೋದರರಾದ :
✦ ಶ್ರೀನಿವಾಸ ಬಿ.ಎಸ್. ✦ ಕೃಷ್ಣ ಬಿ.ಎಸ್. ✦ ಮಾರುತಿ ಬಿ.ಎಸ್.








# ಸಂವಿಧಾನ ಪೀಠಿಕೆಗೆ ಮಳೆ ಸಿಂಚನ

**(1ನೇ ಪುಟದಿಂದ)** ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಸರಗಿ, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ್, ಉಪವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತೆ ರೇಣುಕಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಚಮನ್‌ಸಾಬ್ ಮತ್ತಿತರರು ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ.ನಾಗರಾಜ ಸ್ವಾಗತಿಸಿದರು.

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ದಾವಣಗೆರೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸಿದ್ಧಗಂಗಾ ವಿದ್ಯಾಸಂಸ್ಥೆಯ 3000 ಮಕ್ಕಳಿಂದ ಮೂಡಿಬಂದ ಬೃಹತ್ತಾದ ಕೇಸರಿ, ಬಿಳಿ, ಹಸಿರು ಬಣ್ಣಗಳ ಭಾರತ ನಕ್ಷೆ ವಿನ್ಯಾಸ

# ಕಾವೇರಿ ರಕ್ಷಣಾ ಯಾತ್ರೆಗೆ ಬಿಜೆಪಿ ನಿರ್ಧಾರ

ಬೆಂಗಳೂರು, ಸೆ.15 - ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವುದನ್ನು ವಿರೋಧಿಸಿ ಕಾವೇರಿ ಜಲಾನಯನ ಪ್ರದೇಶದ ತಾಲೂಕುಗಳಲ್ಲಿ ಕಾವೇರಿ ರಕ್ಷಣಾ ಯಾತ್ರೆ ಕೈಗೊಳ್ಳಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಕಾವೇರಿ ಕೊಳ್ಳದ ಬಿಜೆಪಿ ಮುಖಂಡರು ಮತ್ತು ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶ ಹಬ್ಬ ಮುಗಿಯುತ್ತಿದ್ದಂತೆ, ಕೋಲಾರದ ಕುರುಡು ಮಲೆ ಗಣಪತಿ ದೇವಾಲಯದಿಂದ ಯಾತ್ರೆ ಆರಂಭಿಸುವುದಾಗಿ ಪ್ರಕಟಿಸಿದರು.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟ್ಯಾಲಿನ್ ಅವರನ್ನು ಓಲೈಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮ್ಮ ರಾಜ್ಯದ ರೈತರ ಹಿತ ಬಲಿಕೊಟ್ಟಿದ್ದಾರೆ. ಕಾವೇರಿ ನೀರು ನಿಯಂತ್ರಣ ಸಮಿತಿ ಮುಂದೆ ಸಮರ್ಪಕ ವಾದ ಮಂಡಿಸದೆ, ತಮಿಳುನಾಡಿನ ಮುಖ್ಯಮಂತ್ರಿಯಾಗಿ ಉಪ ಮುಖ್ಯಮಂತ್ರಿಯಾಗಿ ನಮ್ಮವರು ವರ್ತಿಸಿದ್ದಾರೆ ಎಂದವರು ಟೀಕಿಸಿದ್ದಾರೆ.

ತಮಿಳುನಾಡಿಗೆ ಎಷ್ಟು ನೀರು ಹರಿಸಬೇಕೋ ಅಷ್ಟು ಹರಿಸಿ ನಂತರ ಬರ ಘೋಷಣೆ ಮಾಡಿದ್ದಾರೆ. ಘೋಷಣೆಯ ನಂತರ ಎಲ್ಲಾ ತಾಲ್ಲೂಕಿನ ರೈತರಿಗೂ ಪರಿಹಾರ ದೊರೆಯಲಿದೆ. ಆದರೆ, ಕಾವೇರಿ ಕೊಳ್ಳದ ರೈತರಿಗೆ ಬರ ಪರಿಹಾರದ ಜತೆಗೆ ಹೆಚ್ಚುವರಿ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ತಮಿಳುನಾಡು ಎರಡನೇ ಬೆಳೆ ಬೆಳೆಯುತ್ತಿದೆ. ಸರ್ಕಾರ ಸಿಡಬ್ಲ್ಯೂಆರ್‌ಸಿ, ಸಿಡಬ್ಲ್ಯೂಎಂಎ ಮುಂದೆ ಸರಿಯಾಗಿ ಪ್ರತಿಪಾದಿಸಲಿಲ್ಲ. ಸರ್ಕಾರ ರಾಜ್ಯದ ಹಿತ ಬಲಿ ಕೊಟ್ಟು ತಮಿಳುನಾಡಿನ ಎರಡನೇ ಬೆಳೆಗೆ ನೀರು ಬಿಟ್ಟಿದೆ. ಇದರ ಬಗ್ಗೆ ಸುಪ್ರೀಂಕೋರ್ಟ್ ನಲ್ಲಿ ಸರಿಯಾಗಿ ಮನವರಿಕೆ ಮಾಡಿಕೊಡಲಿಲ್ಲ. ನೀರು ಬಿಟ್ಟು ನಮಗೆ ಸಮಸ್ಯೆ ಆಗಿದೆ. ರಾಜ್ಯ ಸರ್ಕಾರ ರಕ್ಷಣಾತ್ಮಕವಾಗಿ ನಡೆದುಕೊಳ್ಳುತ್ತಿದೆ. ಈ ಸರ್ಕಾರ ರಾಜ್ಯದ ನೀರಿನ ಹಕ್ಕು ರಕ್ಷಣೆ ಮಾಡಿಲ್ಲ. ನೀರಿನ ಹಕ್ಕು ರಕ್ಷಣೆ ಮಾಡುವ ಬದ್ಧತೆ, ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

# ಒಂದೇ ಸೂರಿನಡಿ ಕೇಂದ್ರ - ರಾಜ್ಯ ಸರ್ಕಾರಗಳ ಸಾರ್ವಜನಿಕ ಸೇವೆ ನೀಡುತ್ತಿರುವ ಅಂಚೆ ಇಲಾಖೆ

## ಜಗಳೂರಿನ 'ಅಂಚೆ ಜನ ಸಂಪರ್ಕ ಅಭಿಯಾನ'ದಲ್ಲಿ ಅಂಚೆ ನಿರೀಕ್ಷಕ ವೇಣುಗೋಪಾಲ್



ಜಗಳೂರು, ಸೆ. 15- ಭಾರತೀಯ ಅಂಚೆ ಇಲಾಖೆ ದಾವಣಗೆರೆ ವಿಭಾಗದ ವತಿಯಿಂದ ಇಲ್ಲಿನ ಅಂಚೆ ಕಚೇರಿಯಲ್ಲಿ 'ಅಂಚೆ ಜನ ಸಂಪರ್ಕ ಅಭಿಯಾನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾರ್ವಜನಿಕ ಸೇವೆಗಳು ಒಂದೇ ಸೂರಿನಡಿಯಲ್ಲಿ ಒದಗಿಸುವುದರ ಮೂಲಕ ದಾವಣಗೆರೆ ಅಂಚೆ ವಿಭಾಗವು ಯಶಸ್ವಿಯಾಗಿದೆ.

ಈ ಅಭಿಯಾನದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಖಾತೆಗಳನ್ನು ತೆರೆದಿದ್ದು, ವಿವಿಧ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿ, ಜನರ ಮನೆ ಬಾಗಿಲಿಗೆ ಸೌಲಭ್ಯಗಳನ್ನು ತಲುಪಿಸುವಲ್ಲಿ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ಅಂಚೆ ನಿರೀಕ್ಷಕ ವೇಣುಗೋಪಾಲ್ ತಿಳಿಸಿದರು.

ದಾವಣಗೆರೆ ಅಂಚೆ ಅಧೀಕ್ಷಕ ಚಂದ್ರಶೇಖರ್ ಮಾತನಾಡಿ, ಈಗಿನ ಆಧುನಿಕ ಜಗತ್ತಿಗೆ ತಕ್ಕಂತೆ ಅಂಚೆ ಇಲಾಖೆಯೂ ಬ್ಯಾಂಕಿಂಗ್ ವ್ಯವಹಾರದಲ್ಲಿ ಅಭಿವೃದ್ಧಿ ಹೊಂದಿದ್ದು, ಸಾಮಾನ್ಯ ಜನರಿಗೆ ತಮ್ಮ ಮನೆ ಬಾಗಿಲಿಗೆ, ಐಪಿಪಿಬಿ, ಡಿಜಿಟಲ್ ಅಕೌಂಟ್‌ಗಳನ್ನು ಮಾಡಿ ಕೊಡುವುದರ ಮೂಲಕ ಎಟಿಎಂ ಮತ್ತು ಫೋನ್ ಪೇ ಮುಂತಾದ ಆಧುನಿಕ ವ್ಯವಹಾರಗಳನ್ನು ಅಂಚೆ ಇಲಾಖೆಯು ಒದಗಿಸಿದೆ. ಅನ್ನಭಾಗ್ಯ, ಗೃಹಲಕ್ಷ್ಮಿ, ಪಿಎಂ ಕಿಸಾನ್ ಯೋಜನೆಗಳ ಸೌಲಭ್ಯಗಳನ್ನೂ ಜನರಿಗೆ ಒದಗಿಸುತ್ತಿದೆ ಎಂದರು.

ಜನ ಸಂಪರ್ಕ ಅಭಿಯಾನವನ್ನು ಜಗಳೂರಿನಲ್ಲಿ ಏರ್ಪಡಿಸಿದ್ದರಿಂದ ಸ್ಥಳೀಯ ಗ್ರಾಹಕರಿಗೆ ಅನೇಕ ಉಪಯುಕ್ತ ಸೇವೆಗಳನ್ನು ನೀಡುವುದರ ಮೂಲಕ ಜನರ ಮನಸ್ಸಿಗೆ ಇನ್ನಷ್ಟು ಹತ್ತಿರವಾಗುವಲ್ಲಿ ಅಂಚೆ ಇಲಾಖೆ ಯಶಸ್ವಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಿಪಿಐ ಶ್ರೀನಿವಾಸರಾವ್ ಮಾತನಾಡಿ, ಅಂಚೆ ಕಚೇರಿಯಲ್ಲಿ ಉಳಿತಾಯ ಮಾಡಿದರೆ ಇಟ್ಟ ಹಣಕ್ಕೆ ಲೋಪವಾಗು ವುದಿಲ್ಲ. ನಿಮ್ಮ ಮಕ್ಕಳ ಭವಿಷ್ಯಕ್ಕೆ ಉಳಿತಾಯ ಅವಶ್ಯಕ ಎಂದರು.

ಮಾರ್ಕೆಟಿಂಗ್ ಮ್ಯಾನೇಜರ್ ಸಂತೋಷ್ ಮಾತನಾಡಿ, ಗೋಲ್ಡ್ ಬಾಂಡ್ ಅವಧಿ 8 ವರ್ಷಕ್ಕೆ ಎರಡೂವರೇ ಪರ್ಸೆಂಟ್ ಬಡ್ಡಿ ಹಾಕಿ ಕೊಡಲಾಗುವುದು ಮತ್ತು ಎನ್‌ಪಿಎಸ್‌ನಂತಹ ವಿವಿಧ ಸೌಲಭ್ಯಗಳನ್ನು ಒಂದೇ ಸೂರಿನಡಿಯಲ್ಲಿ ಒದಗಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎ.ಕೆ.ಬಸಪ್ಪ ಪೋಸ್ಟ್ ಮಾಸ್ಟರ್ ಜಗಳೂರು, ಸುರೇಶ್ ತಾಲ್ಲೂಕು ಕಚೇರಿ ಶಿರಸ್ತೇದಾರರು, ಶ್ರೀನಿವಾಸ್ ರಾವ್ ಆರಕ್ಷಕ ನಿರೀಕ್ಷಕರು, ರಾಜೇಶ್ವರಿ ಪೂಜಾರ್ ಪ್ರಾಂಶುಪಾಲರು, ರೇಖಾ ಸಿಡಿಪಿಒ ಇಲಾಖೆ, ಹರ್ಷ ಕೃಷಿ ಇಲಾಖೆ, ರೇವಣ್ಣ ಹೊಸಕೆರೆ, ಗುರುಪ್ರಸಾದ್ ಸಹಾಯಕ ಅಂಚೆ ಅಧೀಕ್ಷಕರು ಮತ್ತು ಇತರರು ಉಪಸ್ಥಿತರಿದ್ದರು.

# ಭತ್ತ, ಕಬ್ಬು ಬಿತ್ತನೆ ಪ್ರದೇಶ ಹೆಚ್ಚಳ

**(1ನೇ ಪುಟದಿಂದ)** ಪ್ರದೇಶದಲ್ಲಿ ಬೇಳೆಗಳನ್ನು ಬೆಳೆಯಲಾಗಿತ್ತು. ಈ ವರ್ಷ ಅದು 121 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಖಾದ್ಯ ತೈಲದ ಬಿತ್ತನೆ ಪ್ರಮಾಣ 194.33 ಲಕ್ಷ ಹೆಕ್ಟೇರ್‌ನಿಂದ 192.20 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಕಬ್ಬಿನ ಬಿತ್ತನೆ ಪ್ರದೇಶ ಕಳೆದ ವರ್ಷ 55.65 ಲಕ್ಷ ಹೆಕ್ಟೇರ್ ಇದ್ದದ್ದು, ಈ ವರ್ಷ 59.91 ಲಕ್ಷ ಹೆಕ್ಟೇರ್‌ಗೆ ಹೆಚ್ಚಾಗಿದೆ.

ಹತ್ತಿ ಬಿತ್ತನೆ ಪ್ರಮಾಣ 127.27 ಲಕ್ಷ ಹೆಕ್ಟೇರ್‌ನಿಂದ 123.22 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಒಟ್ಟಾರೆ ಎಲ್ಲಾ ಮುಂಗಾರು ಬೆಳೆಗಳ ಬಿತ್ತನೆ ಪ್ರದೇಶದ ಕಳೆದ ವರ್ಷ 1,091.87 ಲಕ್ಷ ಹೆಕ್ಟೇರ್ ಇದ್ದದ್ದು, ಈ ವರ್ಷ 1,095.43 ಲಕ್ಷ ಹೆಕ್ಟೇರ್‌ಗೆ ಹೆಚ್ಚಾಗಿದೆ.

# ನಾಳೆ ಜಿಲ್ಲಾ ಗಂಗಾಮತಸ್ತರ ಸಭೆ

ದಾವಣಗೆರೆ, ಸೆ.15- ಜಿಲ್ಲಾ ಗಂಗಾಮತಸ್ತರ (ಬೆಸ್ತರ) ಸಂಘದಿಂದ ಸಮಾಜದ ಅಭಿವೃದ್ಧಿ ಮತ್ತು ಮೀನುಗಾರಿಕೆ ಬಗ್ಗೆ ಚಿಂತನ ಮಂಥನ ಸಭೆಯನ್ನು ನಾಡಿದ್ದು ದಿನಾಂಕ 17ರ ಭಾನುವಾರ ಮಧ್ಯಾಹ್ನ 12:30 ಗಂಟೆಗೆ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರ ನೇತೃತ್ವದಲ್ಲಿ ನಗರದ ಜಿಲ್ಲಾ ಗಂಗಾಮತಸ್ಥರ ( ಬೆಸ್ತರ ) ಸಂಘದ ವಿದ್ಯಾರ್ಥಿ ನಿಲಯದ ಸಭಾ ಭವನದಲ್ಲಿ ಕರೆಯಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಜೆ. ಉಮೇಶ್ ತಿಳಿಸಿದ್ದಾರೆ.

# ಕೆ.ಎನ್. ಹಳ್ಳಿ ಗ್ರಾ.ಪಂ. ಉಪಾಧ್ಯಕ್ಷರಾಗಿ ಪರಶುರಾಮ್



ಮಲೇಬೆನ್ನೂರು, ಸೆ. 15- ಕಡಾರನಾಯ್ಕನಹಳ್ಳಿ ಗ್ರಾಮ ಪಂಚಾಯತಿ ನೂತನ ಉಪಾಧ್ಯಕ್ಷರಾಗಿ ಹೊಸಪಾಳ್ಯದ ಪರಶುರಾಮ್ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದೆ ಉಪಾಧ್ಯಕ್ಷ ಸ್ಥಾನ ಎಸ್ಟಿಗೆ ಮೀಸಲಾಗಿತ್ತು. ಚುನಾವಣೆ ವೇಳೆ ಉಪಾಧ್ಯಕ್ಷ ಸ್ಥಾನಕ್ಕೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣೆ ನಡೆದಿರಲಿಲ್ಲ. ಎಸ್ಟಿ ಮೀಸಲಾತಿ ಬದಲಾಗಿ ಎಸ್ಸಿ ಮೀಸಲಾತಿ ನೀಡುವಂತೆ ಗ್ರಾ.ಪಂ. ಸದಸ್ಯರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಆ ಪ್ರಕಾರ ಉಪಾಧ್ಯಕ್ಷ ಸ್ಥಾನವನ್ನು ಎಸ್ಸಿಗೆ ಮೀಸಲು ಮಾಡಿ ಶುಕ್ರವಾರ ಚುನಾವಣೆ ನಡೆಸಲಾಯಿತು. ಪಶು ವೈದ್ಯಕೀಯ ಇಲಾಖೆಯ ಡಾ. ಸಿದ್ದೇಶ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಗ್ರಾ.ಪಂ. ಅಧ್ಯಕ್ಷೆ ಮಂಜಮ್ಮ, ಸದಸ್ಯರಾದ ವಿ. ಕುಬೇರಪ್ಪ, ಎಂ. ಭರಮಗೌಡ ಪಾಟೀಲ್, ಜಿ. ಬಸವನಗೌಡ, ಗಿರಿಜಮ್ಮ, ಹುಸೇನ್ ಸಾಬ್, ಕಾಮಾಕ್ಷಮ್ಮ, ರೇಖಮ್ಮ, ಅನಿತಾ ಸೇರಿದಂತೆ ಕೆ.ಎನ್. ಹಳ್ಳಿ ಹಾಗೂ ಹೊಸಪಾಳ್ಯ ಗ್ರಾಮದ ಮುಖಂಡರು ಈ ವೇಳೆ ಹಾಜರಿದ್ದರು.

# ಭದ್ರಾ ನೀರು ನಿಲುಗಡೆ ರೈತರಿಗೆ ವಂಚನೆ

ದಾವಣಗೆರೆ, ಸೆ. 15 – ನಾಳೆ ಶನಿವಾರದಿಂದ ಹತ್ತು ದಿನಗಳ ಕಾಲ ಭದ್ರಾ ನೀರು ಹರಿಸುವುದನ್ನು ನಿಲ್ಲಿಸಲು ತೆಗೆದುಕೊಂಡಿರುವ ನಿರ್ಧಾರವನ್ನು ಖಂಡಿಸಿರುವ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಹೆಚ್.ಆರ್. ಲಿಂಗರಾಜ್ ಶಾಮನೂರು, ಇದು ಅಚ್ಚುಕಟ್ಟು ವ್ಯಾಪ್ತಿಯ ಶೇ.70ರಷ್ಟು ರೈತರನ್ನು ವಂಚಿಸಿದಂತೆ ಎಂದು ಹೇಳಿದ್ದಾರೆ.

ಕಳೆದ ಸೆ.6ರಂದು ನಡೆದ ಭದ್ರಾ ಯೋಜನಾ ನೀರಾವರಿ ಸಲಹಾ ಸಮಿತಿಯ ಸಭೆಯ ತೀರ್ಮಾನದಂತೆ ನೀರು ಹರಿಸುವುದನ್ನು ನಿಲ್ಲಿಸುವುದಾಗಿ ಕರ್ನಾಟಕ ನೀರಾವರಿ ನಿಗಮ ಆದೇಶ ಹೊರಡಿಸಿದೆ. ಆದರೆ, ಅಂದಿನ ಸಭೆಯಲ್ಲಿ ದಾವಣಗೆರೆ ಭಾಗದ ಜನಪ್ರತಿನಿಧಿಗಳು ಪಾಲ್ಗೊಂಡಿರಲಿಲ್ಲ. ಮುಂದಿನ ದಿನಗಳಲ್ಲಿ ಪ್ರತ್ಯೇಕ ಸಭೆ ಕರೆದು ನಿರ್ಧಾರ ತೆಗೆದುಕೊಳ್ಳುವುದಾಗಿ ತಿಳಿಸಲಾಗಿತ್ತು ಎಂದು ಲಿಂಗರಾಜ್ ತಿಳಿಸಿದ್ದಾರೆ. ಕೇವಲ ಶೇ.10ರಷ್ಟಿರುವ ಜನರ ಮಾತು ಕೇಳಿ ಈ ನಿರ್ಧಾರ ತೆಗೆದುಕೊಂಡಿರುವುದು ಘೋರ ಅಪರಾಧ. ಈ ನಿರ್ಧಾರದ ವಿರುದ್ಧ ಹೋರಾಟ ನಡೆಸಲಾಗುವುದು. ಮುಂದೆ ಆಗುವ ತೊಂದರೆಗಳಿಗೆ ಸರ್ಕಾರವೇ ಹೊಣೆಯಾಗಲಿದೆ ಎಂದು ಹೇಳಿದ್ದಾರೆ.

# ಜಗಳೂರು : ಅಂಗವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಪ್ರತಿಭಟನೆ




ಜಗಳೂರು, ಸೆ. 15 - ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಐಟಿಯುಸಿ ಸಂಯೋಜಿತ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇಷನ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಅಂಬೇಡ್ಕರ್ ವೃತ್ತದ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ತಹಶೀಲ್ದಾರ್ ಗೆ ಮನವಿ ಸಲ್ಲಿಸಿದರು.

ಅಂಗನವಾಡಿ ಕೇಂದ್ರಗಳಲ್ಲಿಯೇ ಕಟ್ಟಡ ಕಾರ್ಮಿಕ ಮತ್ತು ಕಲ್ಯಾಣ ಇಲಾಖೆಯಿಂದ ಪರ್ಯಾಯವಾಗಿ ಶಿಶುಪಾಲನಾ ಕೇಂದ್ರ ಹಾಗೂ ಶಾಲಾ ಪೂರ್ವ ಶಿಕ್ಷಣ ತರಬೇತಿ ಕೇಂದ್ರಗಳನ್ನು ತೆರಯುವ ಆದೇಶವನ್ನು ಕೂಡಲೇ ರದ್ದುಪಡಿಸಬೇಕು. ಅಲ್ಲದೆ 48 ವರ್ಷಗಳಿಂದ ಐಸಿಡಿಎಸ್ ಯೋಜನೆಯಡಿ 6 ವರ್ಷದ ವಯೋಮಾನದವರಿಗೆ ಶಿಶು ಅಭಿವೃದ್ದಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಲಾಲನೆ ಪಾಲನೆ, ಪೌಷ್ಠಿಕ ಆಹಾರ ಇತ್ಯಾದಿ ಸೇವೆಗಳನ್ನು ನಡೆಸುತ್ತಾ ಬಂದಿದ್ದು ಮುಂದುವರೆಸಬೇಕು. ಅಲ್ಲದೆ ಕಾರ್ಯಕರ್ತೆಯರಿಗೆ 15000 , ಸಹಾಯಕಿಯರಿಗೆ 10000 ಹಾಗೂ ನಿವೃತ್ತಿಹೊಂದಿದವರಿಗೆ, 3ಲಕ್ಷ ಇಡಿಗಂಟು ನೀಡುವ 6 ನೇ ವೇತನದ ಭರವಸೆಯನ್ನು ಶೀಘ್ರ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಐಟಿಯುಸಿ ತಾಲ್ಲೂಕು ಪದಾಧಿಕಾರಿಗಳಾದ ಮಹಮ್ಮದ್ ಭಾಷಾ, ಸುಶೀಲಮ್ಮ, ಭರಮಕ್ಕ, ಹಾಲಮ್ಮ, ಗೌರಮ್ಮ, ಶಶಿಕಲಾ, ವೀರಣ್ಣ, ಮಾದಿಹಳ್ಳಿ ಮಂಜಪ್ಪ,ಮಂಜಮ್ಮ ಸೇರಿದಂತೆ ನೂರಾರು ಕಾರ್ಯಕರ್ತೆಯರು ಭಾಗವಹಿಸಿದ್ದರು.


## 10ನೇ ವರ್ಷದ ಪುಣ್ಯಸ್ಮರಣೆ



ದೇಹದಾನಿ ಆರ್. ಪ್ರಮೀಳಮ್ಮ
ಸ್ಟ್ಯಾಂಪ್ ವೆಂಡರ್
ನೀವು ನಮ್ಮನ್ನಗಲಿ ಇಂದಿಗೆ (16.09.2023) ಹತ್ತು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ.

ಮಗಳು : ಶ್ರೀಮತಿ ಗೀತಾ ಯು.ಆರ್., ಡಿಸಿಸಿ ಬ್ಯಾಂಕ್, ದಾವಣಗೆರೆ.
ಅಳಿಯ : ಹೆಚ್. ಯು.ರಾಮಸ್ವಾಮಿ, ಸಹ ಶಿಕ್ಷಕರು
ಡಿ.ಕೆ. ಸಂಗಮೇಶ್ ಎಲಿಗಾರ್, ಸ್ಟ್ಯಾಂಪ್ ವೆಂಡರ್, ಶ್ರೀಮತಿ ಶಾಂತ ಶಿವರಾಜ ಗವಾಯಿ



॥ ಶ್ರೀ ಉಚ್ಚಂಗೆಮ್ಮದೇವಿ ಕೃಪೆ ॥ ॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಜಿಲ್ಲೆ, ತಾಲ್ಲೂಕು ಅಣಜಿ ವಾಸಿ
ಕಂಭತ್ತಹಳ್ಳಿ ದಿ॥ ಶ್ರೀ ಹೊನ್ನಪ್ಪನವರ ಮಗನಾದ
ಕಂಭತ್ತಹಳ್ಳಿ ಶ್ರೀ ನೀಲಕಂಠಪ್ಪ ಮತ್ತು ಸಹೋದರರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 8-9-2023ನೇ ಶುಕ್ರವಾರ ಬೆಳಿಗ್ಗೆ 6-30 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ



ಕಂಭತ್ತಹಳ್ಳಿ ಶ್ರೀಮತಿ ಗೌರಮ್ಮ
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ : 16-09-2023ನೇ ಶನಿವಾರ ಬೆಳಿಗ್ಗೆ 10.30ಗಂಟೆಗೆ
ಅಣಜಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಕಂಭತ್ತಹಳ್ಳಿ ಶ್ರೀ ನೀಲಕಂಠಪ್ಪ ಮತ್ತು ಸಹೋದರರು, ಮಕ್ಕಳು, ಅಣಜಿ ಗ್ರಾಮಸ್ಥರು ಹಾಗೂ ಬಂಧು - ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ರಾಣೇಬೆನ್ನೂರು ವ್ಯಾಪ್ತಿಯ ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ನಾಗೇನಹಳ್ಳಿ, ಹೊಳೆಆನ್ವೇರಿ, ಮಲ್ಲನಹಳ್ಳಿ, ಮುದೇನೂರು, ಹನುಮನಹಳ್ಳಿ ತೆರೆದಹಳ್ಳಿ, ಕೃಷ್ಣಾಪುರ, ಮುಷ್ಠೂರು, ಇಟಗಿ ಗ್ರಾಮಗಳಿಗೆ ಮತ್ತು ಬ್ಯಾಡಗಿ ಕುಡಿಯುವ ನೀರು ಸರಬರಾಜಿನ ವಾಟರ ಸಪ್ಲೈ ಸ್ಥಾವರಕ್ಕೆ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರು ವುದಿಲ್ಲ ಎಂದು ರಾಣೇಬೆನ್ನೂರು ಹೆಸ್ಕಾಂನ ರಾಣೇಬೆನ್ನೂರು ಉಪವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.


## 14ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಸುಶೀಲಮ್ಮ ಟಿ. ಬಸವರಾಜಪ್ಪ
ಯಕ್ಕನಹಳ್ಳಿ.
ದಾವಣಗೆರೆ ಜಿಲ್ಲಾ ಪಂಚಾಯ್ತಿ ಸದಸ್ಯರು, ಕುಂದೂರು ಕ್ಷೇತ್ರ
ಜನನ : 25.12.1958 - ಮರಣ : 16.09.2009
ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು. ಸದಾ ನಿಮ್ಮ ಸವಿನೆನಪಿನಲ್ಲಿರುವ.....

ದಿ॥ ಶ್ರೀಮತಿ ಸಿದ್ದಮ್ಮ, ದಿ॥ ತಿಮ್ಲಾಪುರದ ಸಿದ್ದಪ್ಪನವರ ಮಕ್ಕಳು, ಸೊಸೆಯಂದಿರು ಹಾಗೂ ಅಳಿಯಂದಿರು, ಮೊಮ್ಮಕ್ಕಳು.
ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್
ಯಕ್ಕನಹಳ್ಳಿ ಮತ್ತು ಮಲೇಬೆನ್ನೂರು.
ದಿ॥ ಶ್ರೀ ಹೊಸಮನಿ ವೀರಭದ್ರಪ್ಪ ಮತ್ತು ಸಹೋದರರು ಹಾಗೂ ಹೊಸಮನಿ ವಂಶಸ್ಥರು, ಬೆಳ್ಳೂಡಿ.


# ನೀರಾವರಿ ಕಚೇರಿಗಳಿಗೆ ಬೀಗ ಜಡಿದು ಪ್ರತಿಭಟನೆ ಮಾಡಿದ ದಿನಗೂಲಿ ನೌಕರರು



ಮಲೇಬೆನ್ನೂರು, ಸೆ. 15- ಇಲ್ಲಿನ ಭದ್ರಾ ನಾಲಾ ನಂ. 3 ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಕಚೇರಿ ಎದುರು ಬಾಕಿ ವೇತನಕ್ಕೆ ಆಗ್ರಹಿಸಿ ಕಳೆದ ಮೂರು ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ಹೊರ ಗುತ್ತಿಗೆ ನೌಕರರು (ಸೌಡಿಗಳು) ಶುಕ್ರವಾರ ನೀರಾವರಿ ಕಚೇರಿಗಳಿಗೆ ಬೀಗ ಹಾಕಿ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಧಿಕ್ಕಾರ ಕೂಗಿದರು.

ಕಳೆದ 5-6 ತಿಂಗಳಿನಿಂದ ವೇತನ ನೀಡದೇ ನಮ್ಮನ್ನು ಸಾಯುಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ ನೌಕರರು ವೇತನ ನೀಡುವವರಿಗೂ

### ಬಾಕಿ ವೇತನಕ್ಕೆ ಆಗ್ರಹ


ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದರು. ನಮ್ಮ ಬಾಕಿ ವೇತನ ಸಮಸ್ಯೆ ಬಗೆಹರಿಸುವ ಬಗ್ಗೆ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ ಎಂದು ದಿನಗೂಲಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಆಂಜನೇಯ ದೂರಿದರು.

ಅಚ್ಚುಕಟ್ಟಿನ ರೈತರೂ ಕೂಡ ನೌಕರರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ, ಸೌಡಿಗಳು ಕೆಲಸಕ್ಕೆ ಬಾರದಿದ್ದರಿಂದ ಕಾಲುವೆಗಳಲ್ಲಿ ನೀರಿನ ನಿರ್ವಹಣೆ ಇಲ್ಲದೆ ನೀರು ಕೊನೆ ಭಾಗಕ್ಕೆ ಬರುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಲೇಬೆನ್ನೂರು, ಬಸವಾಪಟ್ಟಣ ಮತ್ತು ಸಾಸ್ವೆಹಳ್ಳಿ ಉಪವಿಭಾಗಗಳ ನೂರಾರು ನೌಕರರು ಪ್ರತಿಭಟನೆಯಲ್ಲಿದ್ದರು.

ಏತನ್ಮಧ್ಯೆ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ಬೆಂಗಳೂರಿನಲ್ಲಿ ನೀರಾವರಿ ನಿಗಮದ ಎಂ.ಡಿ. ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಿ ದಿನಗೂಲಿ ನೌಕರರ ಸಮಸ್ಯೆ ಬಗೆಹರಿಸಿಕೊಡುವಂತೆ ಮನವಿ ಮಾಡಿದ್ದಾರೆ.

## ದೇಹದಾನಿ ಅತ್ತಿಗೆರೆ ರಾಜಶೇಖರಪ್ಪ ನಿಧನ



ದಾವಣಗೆರೆ ಬಸವರಾಜು ಪೇಟೆ, ಎಂ.ಕೆ. ಬಿಲ್ಡಿಂಗ್ ಹತ್ತಿರದ ವಾಸಿ ಶ್ರೀಮತಿ ಅನ್ನಪೂರ್ಣಮ್ಮನವರ ಪತಿಯವರಾದ ಅತ್ತಿಗೇರಿ ರಾಜಶೇಖರಪ್ಪ (82) ಇವರು ದಿನಾಂಕ 15.09.2023ರ ಶುಕ್ರವಾರ 3 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ತಂಗಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ದೇಹವನ್ನು ದಿನಾಂಕ 16.09.2023ರ ಶನಿವಾರ ಬೆಳಗ್ಗೆ 11 ಗಂಟೆಗೆ ನಗರದ ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ರೀಸರ್ಚ್ ಸೆಂಟರ್‌ಗೆ ಹಸ್ತಾಂತರಿಸಲಾಗುವುದು.

## ನ್ಯಾಮತಿಯಲ್ಲಿ ಇಂದು ಬೆಸ್ಕಾಂ ಗ್ರಾಹಕರ ಸಂವಾದ ಸಭೆ

ಬೆವಿಕಂ ನ್ಯಾಮತಿ ಉಪವಿಭಾಗ ಕಚೇರಿಯಲ್ಲಿ ಬೆಸ್ಕಾಂ ಗ್ರಾಹಕರ ಸಂವಾದವು ಇಂದು ಮಧ್ಯಾಹ್ನ 3 ರಿಂದ ಸಂಜೆ 5.30 ರವರೆಗೆ ನಡೆಯಲಿದೆ ಎಂದು ಬೆಸ್ಕಾಂ ನ್ಯಾಮತಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀನಿವಾಸ್ ಬಿ.ಕೆ. ತಿಳಿಸಿದ್ದಾರೆ.

## ಪ್ರೊ. ಕೃಷ್ಣಪ್ಪ ಭವನಕ್ಕಿಂದು ಸತೀಶ್ ಜಾರಕಿಹೊಳಿ

ಹರಿಹರ ಬೈಪಾಸ್ ಬಳಿ ಇರುವ ಪ್ರೊ.ಬಿ.ಕೃಷ್ಣಪ್ಪ ಭವನಕ್ಕೆ ಲೋಕೋಪಯೋಗಿ ಇಲಾಖೆಯ ಸಚಿವರೂ, ಮಾನವ ಬಂಧುತ್ವ ವೇದಿಕೆ ಸಂಸ್ಥಾಪಕರಾದ ಸತೀಶ ಜಾರಕಿಹೊಳಿ ಅವರು ಇಂದು ಬೆಳಿಗ್ಗೆ 10 ಗಂಟೆಗೆ ಭೇಟಿ ನೀಡಲಿದ್ದಾರೆ ಎಂದು ಡಾ.ಎ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

## ಪಿಎಸ್‌ಎಸ್‌ಇಎಂಆರ್ ಶಾಲೆಯಲ್ಲಿ ಇಂದು

ದಾವಣಗೆರೆ, ಸೆ. 15- ತೋಳಹುಣಸೆ ಬಳಿಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿ ಶಾಲೆ ಮತ್ತು ಶ್ರೀಮತಿ ಶಾಮನೂರು ಶಿವಶಂಕರಪ್ಪ ಕಾಲೇಜು ಶಿವಗಂಗೋತ್ರಿಯಲ್ಲಿ ನಾಳೆ ದಿನಾಂಕ 16 ರ ಶನಿವಾರ ಬೆಳಿಗ್ಗೆ 9 ಕ್ಕೆ ನಾಲ್ಕನೆಯ ಆವೃತ್ತಿಯ 'ಸಂಭ್ರಮ್-2023' ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ಉಪನ್ಯಾಸಕ ಶಂಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕನ್ನಡದ ಚಿತ್ರ ನಟಿ ಮೇಘನಾ ರಾಜ್, ಉದ್ಯಮಿ ಎಸ್.ಎಸ್. ಗಣೇಶ್, ಡಾ. ಪ್ರಭಾ ಮಲ್ಲಿಕಾರ್ಜುನ್, ಮಂಜುನಾಥ್, ರಂಗರಾಜ್ ಆಗಮಿಸಲಿದ್ದಾರೆ. ವಿಶೇಷವಾಗಿ ಮಲ್ಲಕಂಬ, ಯಕ್ಷಗಾನ ಪ್ರದರ್ಶನ ಕೂಡ ನಡೆಯಲಿದೆ. ಸುಮಾರು 38 ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸುದ್ದಿಗೋಷ್ಠಿಯಲ್ಲಿ ಪಿ.ಬಿ. ಪ್ರಭು, ಹೆಚ್.ಜಿ. ಉಮಾಪತಿ, ವಿಲ್ಸನ್ ಉಪಸ್ಥಿತರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಜೈಲಿಗೆ ಹೋಗದ ಪ್ರಭಾವಿಗಳು, ಹೊರ ಬರದ ಬುಡಕಟ್ಟು ಜನರು...

ಕಳೆದ ಆಗಸ್ಟ್ ತಿಂಗಳಲ್ಲಿ ಸ್ವಾತಂತ್ರ್ಯ ದಿನ ಆಚರಿಸಿದ್ದೇವೆ. ಆದರೆ, ಯಾರಾದರೂ, ಈ ತಿಂಗಳಲ್ಲಿ 'ಸಾಮಾಜಿಕ ನ್ಯಾಯ ಸಪ್ತಾಹ' ಹಾಗೂ 'ಸಾಮಾಜಿಕ ನ್ಯಾಯ ಪಾಕ್ಷಿಕ' ಆಚರಿಸಿದ್ದೀರಾ? ಆಚರಿಸಿಲ್ಲವೇ? ಪರವಾಗಿಲ್ಲ ಬಿಡಿ. ಈ ಸಪ್ತಾಹ ಹಾಗೂ ಪಾಕ್ಷಿಕ ಆಚರಿಸಬೇಕೆಂದು ಕರೆ ನೀಡಿದವರಿಗೇ ಈ ಬಗ್ಗೆ ನೆನಪಿದೆಯೋ ಇಲ್ಲವೋ ಗೊತ್ತಿಲ್ಲ.

2018ರಲ್ಲಿ ಪರಿಶಿಷ್ಟ ಜಾತಿ - ಪಂಗಡಗಳವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ಕೆಲ ಅಂಶಗಳನ್ನು ನ್ಯಾಯಾಲಯದ ಆದೇಶದ ಮೂಲಕ ಸಡಿಲಿಸಲಾಗಿತ್ತು. ಇದು ದೇಶಾದ್ಯಂತ ಪರಿಶಿಷ್ಟರ ತೀವ್ರ ಆಕ್ರೋಶಕ್ಕೂ ಕಾರಣವಾಗಿತ್ತು. ನಂತರ ಮೋದಿ ಸರ್ಕಾರ ಕಾಯ್ದೆಯನ್ನು ಮತ್ತೆ ಕಠಿಣಗೊಳಿಸುವ ಕ್ರಮ ತೆಗೆದುಕೊಂಡಿತ್ತು. ಇದೇ ತಿಂಗಳಲ್ಲಿ ಒ.ಬಿ.ಸಿ. ಆಯೋಗದ ಮಸೂದೆಯನ್ನೂ ಜಾರಿಗೆ ತರಲಾಗಿತ್ತು. ಈ ಹಿನ್ನೆಲೆಯಲ್ಲಿ ಆಗಸ್ಟ್ ತಿಂಗಳಲ್ಲಿ 'ಸಾಮಾಜಿಕ ನ್ಯಾಯ ಸಪ್ತಾಹ' ಹಾಗೂ 'ಸಾಮಾಜಿಕ ನ್ಯಾಯ ಪಾಕ್ಷಿಕ' ಆಚರಿಸಲು ಮೋದಿ ಕರೆ ನೀಡಿದ್ದರು.

ಆದರೆ, ಅದೇ ವರ್ಷದಲ್ಲಿ ನಡೆದ ಕೆಲ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಅನಿರೀಕ್ಷಿತ ಮುಖಭಂಗ ಕಂಡಿತ್ತು. ಅದಾದ ನಂತರ 'ಸಾಮಾಜಿಕ ನ್ಯಾಯ'ದ ಸಂಭ್ರಮಾಚರಣೆಯ ಮಾತನ್ನು ನಾನಂತೂ ಮತ್ತೆ ಕೇಳಿಲ್ಲ.

ಇದೆಲ್ಲಾ ಈಗ ಪ್ರಸ್ತಾಪಿಸಲು ಕಾರಣ ಏನೆಂದರೆ, ಇಬ್ಬರು ಸಚಿವರು, ಒಬ್ಬ ಶಾಸಕರು ಹಾಗೂ ಚಿತ್ರನಟರೊಬ್ಬರ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಾಗಿದ್ದು ಇತ್ತೀಚಿಗೆ ಸುದ್ದಿಯಾಗಿತ್ತು. ಇವರಾರನ್ನೂ ಬಂಧಿಸಿಲ್ಲ. ಬಂಧಿಸಬೇಕಿತ್ತು ಎಂದು ನಾನೇನೂ ಹೇಳುತ್ತಲೂ ಇಲ್ಲ. ಆದರೆ, ಇದೇ ಮಾನದಂಡ ಇತರೆ ಸಾಮಾನ್ಯರಿಗೂ ಅನ್ವಯವಾಗುತ್ತದೆಯೇ?

ಗಾದೆ ಮಾತೊಂದನ್ನು ಆಡಿದ ನಟನೊಬ್ಬನ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲಾದಾಗ ಸಾಮಾಜಿಕ ನ್ಯಾಯದ ಪರ ಕೆಲ ಸಚಿವರು ಸಾಲಾಗಿ ಹೇಳಿಕೆ ನೀಡಿದ್ದರು. ಅದೇ ಮೊನ್ನೆ ಸಚಿವರೊಬ್ಬರ ವಿರುದ್ಧ ಪ್ರಕರಣ ದಾಖಲಾದಾಗ ಉಪ ಮುಖ್ಯಮಂತ್ರಿಗಳೇ ಆರೋಪಿಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ!

ಮೊನ್ನೆಯಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಮಾತನಾಡುತ್ತಾ, ಎಸ್ ಸಿ / ಎಸ್ ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ 60 ದಿನಗಳಲ್ಲಿ ಆರೋಪ ಪಟ್ಟಿ ಹಾಗೂ 90 ದಿನಗಳಲ್ಲಿ ಚಾರ್ಜ್‌ಶೀಟ್ ಹಾಕದಿದ್ದರೆ, ಆರೋಪಿಗಳಿಗೆ ಸಲೀಸಾಗಿ ಜಾಮೀನು ಸಿಗುತ್ತದೆ. ಹೀಗೆ ಜಾಮೀನು ಪಡೆದವರಿಗೆ ಕಾನೂನಿನ ಭಯ ಇರುತ್ತದೆಯೇ? ಎಂದು ಪ್ರಶ್ನಿಸಿದ್ದರು.

ಆದರೆ, ಪ್ರಭಾವಿಗಳು, ಉನ್ನತ ನ್ಯಾಯಾಲಯ ತಲುಪುವ ಸಾಮರ್ಥ್ಯ ಉಳ್ಳವರು, ಜಾತಿ ನಿಂದನಾ ಕಾಯ್ದೆಯ




ಬಂಧನದಿಂದ ರಕ್ಷಣೆ ಪಡೆಯಬಹುದು ಎನ್ನುವುದಾದರೆ, ಈ ಕಾಯ್ದೆಯ ನೈಜ ಅರ್ಥವಾದರೂ ಏನು?

ಕಳೆದ ವರ್ಷ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ, ಬಡವರು ಸಣ್ಣ ಪುಟ್ಟ ತಪ್ಪುಗಳಿಗಾಗಿ ಜೈಲಿನಲ್ಲಿ ಕೊಳೆಯುತ್ತಿರುವ ವಿಷಯ ಪ್ರಸ್ತಾಪಿಸಿದ್ದರು. ಕಪಾಳಕ್ಕೆ ಭಾರಿಸಿದ ಬಡವ ಜಾಮೀನು ಪಡೆಯುವ ಸಾಮರ್ಥ್ಯ ಇಲ್ಲದೇ ಜೈಲಿನಲ್ಲಿದ್ದಾನೆ, ಕೊಲೆ ಮಾಡಿದ ಪ್ರಭಾವಿ ಹೊರಗಡೆ ಅಲೆದಾಡಿಕೊಂಡಿದ್ದಾನೆ ಎಂದು ವಿಷಾದಿಸಿದ್ದರು.

ಕಾನೂನು, ಹಕ್ಕುಗಳ ತಿಳುವಳಿಕೆ ಇಲ್ಲದ ಬುಡಕಟ್ಟು ಜನರು, ತಮಗೆ ಜಾಮೀನು ದೊರೆತರೂ ಜೈಲಿನಿಂದ ಹೊರ ಬರಲು ಸಾಧ್ಯವಾಗದ ಎಷ್ಟೋ ಪ್ರಕರಣಗಳಿವೆ. 30 ಸಾವಿರ ರೂ.ಗಳ ಶ್ಯೂರಿಟಿ ಬಾಂಡ್ ನೀಡಲು ಸಾಧ್ಯವಾಗದೇ ವ್ಯಕ್ತಿಯೋರ್ವ 22 ವರ್ಷಗಳ ಕಾಲ ವಿಚಾರಣೆ ಇಲ್ಲದೇ ನ್ಯಾಯಾಂಗ ಕಸ್ಟಡಿಯಲ್ಲಿದ್ದ ಪ್ರಕರಣವೂ ವರದಿಯಾಗಿತ್ತು.

ಈ ರೀತಿಯ ಸಮಸ್ಯೆ ಎದುರಿಸುವ ಸಾಕಷ್ಟು ಜನರು ಬುಡಕಟ್ಟು ಹಾಗೂ ಪರಿಶಿಷ್ಟರು ಎಂದು ಹಲವಾರು ವರದಿಗಳು ತಿಳಿಸಿವೆ. ಈಗ, ಇವರಿಗೆ ನೆರವಾಗಲು ವ್ಯವಸ್ಥೆ ರೂಪಿಸಬೇಕೇ ಅಥವಾ ಇವರನ್ನು ಬಂಧಿಸಿಟ್ಟುಕೊಳ್ಳಲು ಹೊಸ ಹೊಸ ಜೈಲುಗಳನ್ನು ಕಟ್ಟಬೇಕೇ?

ಗಾದೆ ಮಾತೊಂದು ಆಡಿದ ಕಾರಣಕ್ಕಾಗಿ ಕೇಸ್ ಹಾಕಲು ಅವಕಾಶ ನೀಡುವುದು 21ನೇ ಶತಮಾನದ ಮಾದರಿ ವ್ಯವಸ್ಥೆ ಎಂದು ಹೇಳಲಿಕ್ಕಾಗದು. ಅದೇ ರೀತಿ, ಸಣ್ಣ ಪುಟ್ಟ ತಪ್ಪು ಮಾಡಿದವರಿಗೆ ಜಾಮೀನು ಪಡೆಯುವ ಸಾಮರ್ಥ್ಯ ಇಲ್ಲ ಎಂದು ಜೈಲಿನಲ್ಲೇ ಮುಂದುವರೆಸಲಾಗದು. ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳಾದವು ಎಂದು ಸಂಭ್ರಮಿಸುವ ಸಂದರ್ಭದಲ್ಲಿ, ವ್ಯಕ್ತಿಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಈ ಎಲ್ಲ ಅಂಶಗಳ ಬಗ್ಗೆ ಯೋಚಿಸಬೇಕಿದೆ.

**- ಎಸ್.ಎ. ಶ್ರೀನಿವಾಸ್**

# ಠಾಣೆಗಳಲ್ಲಿ ಅಕ್ರಮ ಚಟುವಟಿಕೆ ನಡೆದರೆ ಡಿಸಿಪಿ, ಎಸ್ಪಿ ಹೊಣೆ



**ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ**

ಬೆಂಗಳೂರು ಸೆ 15 - ಆಯಾ ಠಾಣಾ ವ್ಯಾಪ್ತಿಗಳಲ್ಲಿ ಅಕ್ರಮ ಚಟುವಟಿಕೆಗಳು, ಕಾನೂನು ಬಾಹಿರ ಸಂಘಟಿತ ಅಪರಾಧಗಳು ನಡೆಯುತ್ತಿದ್ದರೆ, ಡಿಸಿಪಿ, ಎಸ್‌ಪಿ ಮಟ್ಟದ ಅಧಿಕಾರಿಗಳನ್ನು ಹೊಣೆ ಮಾಡಿ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ರಾಜ್ಯ ಪೊಲೀಸ್ ಮಹಾ ನಿರ್ದೇಶಕರ ಕಚೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಪೊಲೀಸ್ ಅಧಿಕಾರಿಗಳಿಗೆ ನೀಡಿದ ಸೂಚನೆಗಳ ಕುರಿತಂತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಸರ್ಕಾರ ಕೇವಲ ಕೆಳ ಹಂತದ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಕ್ರಮ ಕೈಗೊಂಡು ಕೈ ತೊಳೆದುಕೊಳ್ಳುವುದಿಲ್ಲ, ಹಿರಿಯ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳುತ್ತೇವೆ ಎಂದರು.

ಸುಳ್ಳು ಸುದ್ದಿ, ವದಂತಿಗಳ ಮೂಲಕ ಸಮಾಜದ ಶಾಂತಿ ಕದಡುವವರ ವಿರುದ್ಧ ಸ್ವಯಂಪ್ರೇರಿತ ಎಫ್.ಐ.ಆರ್. ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕು. ಸೂಕ್ಷ್ಮ ಪ್ರಕರಣಗಳಲ್ಲಿ ದೂರು ಕೊಡುವವರು ಬರಲಿ ಎಂದು ಕಾಯುತ್ತಾ ಕೂರಬಾರದು ಎನ್ನುವ ಎಚ್ಚರಿಕೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಸಿಸಿಬಿಯನ್ನು ಇನ್ನಷ್ಟು ಸದೃಢ ಗೊಳಿಸಲು 230 ಸಿಬ್ಬಂದಿಯನ್ನು ಹೊಸದಾಗಿ ನೇಮಿಸಿಕೊಳ್ಳಲು ಒಪ್ಪಿಗೆ ನೀಡಲಾಗಿದೆ. ಸಿಬ್ಬಂದಿಗೆ ಅಗತ್ಯವಾದರೆ ಹೊಸ ಕಟ್ಟಡಗಳನ್ನು ಒದಗಿಸಲಾಗುವುದು ಎಂದರು.

ಹಿರಿಯ ಅಧಿಕಾರಿಗಳು ಜನ ಸಂಪರ್ಕಕ್ಕೆ ಸಿಗದೇ ಹೋದರೆ , ಜನ ಸ್ನೇಹಿ ಆಗದೇ ಹೋದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಅನೈತಿಕ ಪೊಲೀಸ್ ಗಿರಿ ವಿಚಾರದಲ್ಲಿ ಸರ್ಕಾರ ಎಳ್ಳಷ್ಟೂ ಸಹಿಸುವುದಿಲ್ಲ ಎಂದು- ಸ್ಪಷ್ಟ ಮಾತುಗಳಲ್ಲಿ ಎಚ್ಚರಿಸಿದರು.

ಠಾಣಾಧಿಕಾರಿಗಳ ಗಮನಕ್ಕೆ ಬರದಂತೆ ಯಾವ ಅಪರಾಧಗಳೂ, ಕರಾಳ ದಂಧೆಗಳೂ ನಡೆಯಲು ಸಾಧ್ಯವಿಲ್ಲ.

ಹಿರಿಯ ಅಧಿಕಾರಿಗಳು ಠಾಣೆಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸುವುದು ಕಡ್ಡಾಯ. ಪೊಲೀಸರು ದರ್ಪ ಬಿಟ್ಟು ಜನಸ್ನೇಹಿಯಾಗಿ ಕೆಲಸ ಮಾಡಬೇಕು. ಠಾಣೆಗೆ ಬರುವ ಬಡವರು, ಜನಸಾಮಾನ್ಯರಿಗೆ ಪೊಲೀಸ್ ವ್ಯವಸ್ಥೆ ಬಗ್ಗೆ ಭರವಸೆ ಹುಟ್ಟುವ ರೀತಿಯಲ್ಲಿ ಜನ ಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸಿ ಎಂದರು.

# ಹರಿಹರ : ಡಿಆರ್‌ಎಂ ಸರ್ಕಾರಿ ಶಾಲೆ ಅವ್ಯವಸ್ಥೆಗೆ ತಹಶೀಲ್ದಾರ್ ಬೇಸರ



ಹರಿಹರ, ಸೆ. 15 - ಇಲ್ಲಿನ ಡಿಆರ್‌ಎಂ ಸರ್ಕಾರಿ ಪ್ರೌಢಶಾಲೆಗೆ ಗುರುವಾರದಂದು ಭೇಟಿ ನೀಡಿದ್ದ ತಹಶೀಲ್ದಾರ್ ಪೃಥ್ವಿ ಸಾನಿಕಂ ಅಲ್ಲಿನ ಅವ್ಯವಸ್ಥೆ ಕಂಡು ಬೇಸರ ವ್ಯಕ್ತಪಡಿಸಿದರು.

ಶಾಲಾಭಿವೃದ್ಧಿ ಸಮಿತಿಯವರ ಕೋರಿಕೆ ಮೇರೆಗೆ ಶಾಲೆಗೆ ಭೇಟಿ ನೀಡಿದ್ದ ತಹಶೀಲ್ದಾರರು, ಶಾಲಾ ಆವರಣದಲ್ಲಿರುವ ಪಾಳು ಬಿದ್ದಿರುವ ಹಳೆ ಕಟ್ಟಡದ ಕೊಠಡಿಗಳಲ್ಲಿ ಅಪಾರ ಪ್ರಮಾಣದ ಬಳಸಿ ಬಿಸಾಡಿದ್ದ ಚುಚ್ಚುಮದ್ದು ನೀಡುವ ಸಿರಿಂಜ್ ಹಾಗೂ ಇತರೆ ತ್ಯಾಜ್ಯವನ್ನು ಗಮನಿಸಿದರು.

ಇಲ್ಲಿ ಸಿರಿಂಜ್‌ಗಳು ಇಷ್ಟೊಂದು ಬಿದ್ದಿರುವುದನ್ನು ಗಮನಿಸಿದರೆ, ಯುವಕರು ಮಾದಕ ದ್ರವ್ಯ ಬಳಕೆ ಮಾಡುತ್ತಿರುವ ಅನುಮಾನ ಬರುತ್ತದೆ, ಜೊತೆಗೆ ಮಲ, ಮೂತ್ರವನ್ನು ಇಲ್ಲಿ ಮಾಡಲಾಗಿದೆ, ಶಾಲಾ ಆವರಣ ಹೀಗಾದರೆ ಹೇಗೆಂದು ಅವರು ಬೇಸರ ವ್ಯಕ್ತಪಡಿಸಿದರು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಜಬಿವುಲ್ಲಾ ಮಾತನಾಡಿ, ಈಗಾಗಲೇ ಪಾಳುಬಿದ್ದ ಹಳೆ ಕಟ್ಟಡದ ತೆರವಿಗೆ ಪಿಡಬ್ಲ್ಯುಡಿ ಇಲಾಖೆ ಹಾಗೂ ನಗರಸಭೆಯಿಂದ ಪರವಾನಿಗೆ ಪಡೆಯಲಾಗಿದೆ. ಈ ಕುರಿತು ಅಗತ್ಯ ದಾಖಲೆಗಳನ್ನು ಬಿಇಒ, ಡಿಡಿಪಿಐ ಕಚೇರಿಗೆ ಕಳಿಸಿ ಹಲವು ತಿಂಗಳಾಗಿವೆ. ಆದರೂ ಕೂಡ ಈವರೆಗೆ ಶಿಕ್ಷಣ ಇಲಾಖೆ ಅಧಿಕಾರಿಗಳು ಕಟ್ಟಡ ತೆರವಿಗೆ ಮುಂದಾಗದೆ ನಿರ್ಲಕ್ಷ್ಯ ವಹಿಸಿದ್ದಾರೆಂದು ತಹಶೀಲ್ದಾರ್ ಗಮನ ಸೆಳೆದರು.

ಶಾಲಾ ಆವರಣದಲ್ಲಿ ಅನ್ಯರು ಪ್ರವೇಶಿಸದಂತೆ ಪೊಲೀಸ್ ಬೀಟ್ ಆಯೋಜಿಸಲು, ಹಳೆ ಕಟ್ಟಡವನ್ನು ತೆರವುಗೊಳಿಸುವ ಕುರಿತು ಡಿಸಿ, ಸಿಇಒ, ಎಸ್ಪಿ, ಡಿಡಿಪಿಐ, ಬಿಇಒ ರವರಿಗೆ ಪತ್ರ ಬರೆದು ಕೋರುತ್ತೇನೆ ಎಂದು ತಹಶೀಲ್ದಾರ್ ಭರವಸೆ ನೀಡಿದರು,

ನಗರ ಠಾಣೆ ಪಿಎಸ್‌ಐ ಚಿದಾನಂದಪ್ಪ, ಗ್ರಾಮ ಲೆಕ್ಕಾಧಿಕಾರಿ ಎಚ್.ಜಿ.ಹೇಮಂತ್ ಕುಮಾರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮೂವರು ಬಾಲ ಕಾರ್ಮಿಕರು ಪತ್ತೆ : ಮಾಲೀಕರ ವಿರುದ್ಧ ಕ್ರಮ

ದಾವಣಗೆರೆ, ಸೆ.15- ನಗರದಲ್ಲಿ ಗುರುವಾರ ಬಾಲಕಾರ್ಮಿಕರು ಮತ್ತು ಕಿಶೋರ ಕಾರ್ಮಿಕರು ದುಡಿಯುತ್ತಿರುವ ಕ್ಷೇತ್ರಗಳಿಗೆ ಅನಿರೀಕ್ಷಿತ ದಾಳಿ ಮಾಡಿ 3 ಜನ ಬಾಲಕಾರ್ಮಿಕರನ್ನು ಪತ್ತೆ ಮಾಡಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ. ಕರೆಣ್ಣವರ ಹಾಗೂ ಸಹಾಯಕ ಕಾರ್ಮಿಕ ಆಯುಕ್ತರಾದ ವೀಣಾ ಎಸ್.ಆರ್, ಜಿಲ್ಲಾ ಕಾರ್ಮಿಕ ಅಧಿಕಾರಿ ಜಿ. ಇಬ್ರಾಹಿಂ ಸಾಬ್, ಕಾರ್ಮಿಕ ನಿರೀಕ್ಷಕರಾದ ರಾಜಪ್ಪ, ನಾಗೇಶ್, ರಾಜಶೇಖರ್, ಯೋಜನಾ ನಿರ್ದೇಶಕರಾದ ಪ್ರಸನ್ನ, ಮಕ್ಕಳ ರಕ್ಷಣಾ ಘಟಕದ ಕೆ.ಆರ್.ಹಾಲೇಶ್, ಹಾಗೂ ಪೊಲೀಸ್ ಸಿಬ್ಬಂದಿಗಳು ಇವರ ನೇತೃತ್ವದಲ್ಲಿ ಅನಿರೀಕ್ಷಿತ ದಾಳಿಯಲ್ಲಿ ಪತ್ತೆಯಾದ 3 ಮಕ್ಕಳನ್ನು ಪುನರ್ ವಸತಿಗಾಗಿ ಮಕ್ಕಳ ಕಲ್ಯಾಣ ಸಮಿತಿಯ ವಶಕ್ಕೆ ನೀಡಲಾಗಿದ್ದು, ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ.ಕರೆಣ್ಣವರ ತಿಳಿಸಿದ್ದಾರೆ.



**ಚಿತ್ರಕಲಾ ಸ್ಪರ್ಧೆ ...**

**ದಾವಣಗೆರೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಚಿತ್ರೋತ್ಸವ-2023ರ ಅಂಗವಾಗಿ ಗುರುವಾರ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗಿಯಾಗಿರುವ ವಿದ್ಯಾರ್ಥಿನಿಯರು.**

## ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಚಿತ್ರ, ರಂಗೋಲಿ ವೈಭವ

ದಾವಣಗೆರೆ, ಸೆ. 15- ಚಿತ್ರೋತ್ಸವ-2023 ಅಂಗವಾಗಿ ಇಲ್ಲಿನ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಜಿಲ್ಲೆಯಪದವಿ ಪೂರ್ವ ಹಾಗೂ ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಚಿತ್ರ ಕಲೆ ಹಾಗೂ ರಂಗೋಲಿ ಬರೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು.

ದಾವಿವಿ ಕಲಾ ನಿಕಾಯ ಡೀನ್ ಡಾ.ವೆಂಕಟರಾವ್ ಪಲಾಟೆ ಚಿತ್ರ ಬರೆಯುವ ಮೂಲಕ ಸ್ಪರ್ಧೆಗೆ ಚಾಲನೆ ನೀಡಿದರು. ಮೌಂಟೇಜ್ ಫೋಟೊಗ್ರಪಿ ಕುರಿತು ಉಪನ್ಯಾಸ ನೀಡಲು ಆಗಮಿಸಿದ ಪ್ರಾಣೇಶ್ ಕುಲಕರ್ಣಿ, ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜೈರಾಜ ಎಂ.ಚಿಕ್ಕಪಾಟೀಲ, ಸಹಾಯಕ ಪ್ರಾಧ್ಯಾಪಕ ಡಾ.ಸತೀಶ್ ಕುಮಾರ್ ಪಿ.ವಲ್ಲೇಪುರೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು.ಶೃತಿ ರಾಯ್ಕರ್ ನಿರೂಪಿಸಿದರು. ಮೋನಿಕಾ ಪ್ರಾರ್ಥಿಸಿದರು. ಸ್ನೇಹ ಸ್ವಾಗತಿಸಿದರು. ಅರುಣ್ ಹಂಚಿನಾಳ ವಂದಿಸಿದರು.

## ಚಾಟ್‌ಬಾಟ್‌ಗಳು ಸಾಮಾನ್ಯ ಮನುಷ್ಯರಿಗಿಂತಲೂ ಹೆಚ್ಚು ಸೃಜನಶೀಲ : ಅಧ್ಯಯನ

ನವದೆಹಲಿ, ಸೆ. 15 – ಕೃತಕ ಬುದ್ಧಿವಂತಿಕೆ ಆಧರಿತ ಚಾಟ್ ಬಾಟ್‌ಗಳು ಸಾಮಾನ್ಯ ಮನುಷ್ಯರಿಗಿಂತಲೂ ಸೃಜಶೀಲವಾಗಿ ಯೋಚಿಸುತ್ತವೆ ಎಂದು ಸಂಶೋಧಕರು ತಿಳಿಸಿದ್ದಾರೆ. ಚಾಟ್‌ಜಿ ಪಿಟಿ ಹಾಗೂ ಮಾನವರ ಪ್ರತಿಕ್ರಿಯೆಗಳ ಅಧ್ಯಯನ ನಡೆಸಿ ಈ ವರದಿ ರೂಪಿಸಲಾಗಿದೆ. ಆದರೂ, ಅತಿ ಹೆಚ್ಚು ಸೃಜನಶೀಲ ವಿಚಾರಗಳು ಮನುಷ್ಯರಿಂದಲೇ ಬಂದಿವೆ ಎಂದು ಸೈಂಟಿಫಿಕ್ ರಿಪೋರ್ಟ್ಸ್ ನಿಯತಕಾಲಿಕದಲ್ಲಿ ಪ್ರಕಟವಾಗಿರುವ ವರದಿಯಲ್ಲಿ ತಿಳಿಸಲಾಗಿದೆ.

ಮನುಷ್ಯರ ವಿಚಾರಗಳು ಹೆಚ್ಚು ವ್ಯಾಪಕವಾಗಿವೆ. ಅತ್ಯುತ್ತಮ ಹಾಗೂ ಕೆಟ್ಟ ವಿಚಾರಗಳೆರಡೂ ಈ ಪಟ್ಟಿಯಲ್ಲಿವೆ. ಮತ್ತೊಂದೆಡೆ, ಕೃತಕ ಬುದ್ಧಿವಂತಿಕೆಯ ಚಾಟ್ ಬಾಟ್ ವಿಚಾರಗಳು ಸಾಮಾನ್ಯ ಮನುಷ್ಯರ ಸೃಜಶೀಲತೆಗಿಂತ ಉನ್ನತವಾಗಿವೆ ಎಂದು ವರದಿ ತಿಳಿಸಿದೆ.

ಫಿನ್‌ಲ್ಯಾಂಡ್ ಹಾಗೂ ನಾರ್ವೆಗಳ ಸಂಶೋಧಕರು ಪರ್ಯಾಯ ಬಳಕೆ ಪರೀಕ್ಷೆ (ಎ.ಯು.ಟಿ.) ಮೂಲಕ ಈ ಅಧ್ಯಯನ ನಡೆಸಿದ್ದಾರೆ. ಸೃಜನಶೀಲ ವಿಚಾರಗಳ ಸೃಷ್ಟಿ ಕೇವಲ ಮಾನವ ಪ್ರಜ್ಞೆಗೆ ಸೀಮಿತವಾಗಿಲ್ಲ ಎಂದು ಈ ಅಧ್ಯಯನ ಇಂಗಿತ ವ್ಯಕ್ತಪಡಿಸಿದೆ. ವಿಚಿತ್ರ ಹಾಗೂ ಕ್ಷುಲ್ಲಕ ವಿಚಾರಗಳೂ ಸೇರಿದಂತೆ ಅಸಾಮಾನ್ಯ ಮತ್ತು ಸೃಜನಶೀಲ ಚಟುವಟಿಕೆ ನಡೆಸುವಂತೆ ಚಾಟ್‌ಬಾಟ್‌ಗಳಿಗೆ ತಿಳಿಸಲಾಗಿತ್ತು. ಹಗ್ಗ, ಪೆಟ್ಟಿಗೆ, ಪೆನ್ಸಿಲ್ ಹಾಗೂ ದೀಪಗಳಂತಹ ದೈನಂದಿನ ವಸ್ತುಗಳನ್ನು ಬಳಸಿ ಚಟುವಟಿಕೆಗಳನ್ನುನಡೆಸಲು ತಿಳಿಸಲಾಗಿತ್ತು. ಈ ಅಧ್ಯಯನದದಲ್ಲಿ 19-40 ವಯಸ್ಸಿನ 256 ಜನ ಭಾಗಿಯಾಗಿದ್ದರು.

## ರಾಮಚರಿತ ಮಾನಸವನ್ನು ಸೈನೇಡ್‌ಗೆ ಹೋಲಿಸಿದ ಆರ್.ಜೆ.ಡಿ. ಸಚಿವ

ಪಾಟ್ನಾ, ಸೆ. 15 – ರಾಮಚರಿತ ಮಾನಸದಂತ ಗ್ರಂಥವನ್ನು ಪೊಟ್ಯಾಶಿಯಂ ಸೈನೇಡ್‌ಗೆ ಹೋಲಿಸುವ ಮೂಲಕ ಬಿಹಾರದ ಶಿಕ್ಷಣ ಸಚಿವ ಚಂದ್ರ ಶೇಖರ್ ವಿವಾದಕ್ಕೆ ಕಾರಣರಾಗಿದ್ದಾರೆ.

ಹಿಂದಿ ಲೇಖಕ ನಾಗಾರ್ಜುನ ಹಾಗೂ ಸಾಮಾಜಿಕ ಚಿಂತಕ ರಾಮ ಮನೋಹರ್ ಲೋಹಿಯಾ ಅವರೂ ರಾಮಚಂದ್ರ ಮಾನಸವನ್ನು ಟೀಕಿಸಿದ್ದಾರೆ ಎಂದು ಸಚಿವರು ಹೇಳಿದ್ದಾರೆ.

ಈ ಗ್ರಂಥದಲ್ಲಿ ಉತ್ತಮ ಅಂಶಗಳಿವೆ. ಆದರೆ, ಊಟ ಎಷ್ಟೇ ಚೆನ್ನಾಗಿದ್ದರೂ ಅದರ ಮೇಲೆ ಸೈನೇಡ್ ಸುರಿದರೆ ತಿನ್ನಲಾಗದು ಎಂದು ಸಚಿವರು ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಆರ್.ಜೆ.ಡಿ. ವಕ್ತಾರ ಶಕ್ತಿ ಯಾದವ್, ನಮ್ಮ ಪಕ್ಷ ಸಾಮಾಜಿಕ ನ್ಯಾಯದ ಪರವಾಗಿದೆ. ಆದರೆ, ನಾವು ಎಲ್ಲ ಧರ್ಮಗಳನ್ನು ಗೌರವಿಸುತ್ತೇವೆ. ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವ ಹೇಳಿಕೆಗಳಿಂದ ದೂರವಿಬೇಕು ಎಂದಿದ್ದಾರೆ.

## ಸತಾರ ಹಿಲ್ ಮ್ಯಾರಥಾನ್‌ನಲ್ಲಿ ನಗರದ ಮಾಜಿ ಯೋಧನ ಸಾಧನೆ



ದಾವಣಗೆರೆ, ಸೆ. 15- ಮಹಾರಾಷ್ಟ್ರದ ಸತಾರದಲ್ಲಿ ನಡೆದ ಸತಾರ ಹಿಲ್ ಆಫ್ ಮ್ಯಾರಥಾನ್ (21.1 ಕಿ.ಮೀ.)ನಲ್ಲಿ ನಗರದ ಬಿಎಸ್‌ಎಫ್ ಮಾಜಿ ಯೋಧ ಮಹ್ಮದ್ ರಫಿ ಅವರು 45-50 ವಯಸ್ಸಿನ ವಿಭಾಗದಲ್ಲಿ ಭಾಗವಹಿಸಿ 2 ಗಂಟೆಗೆ 8 ನಿಮಿಷದಲ್ಲಿ ಪೂರ್ಣಗೊಳಿಸಿ ದ್ವಿತೀಯ ಸ್ಥಾನ ಗಳಿಸಿ ಬೆಳ್ಳಿ ಪದಕ ಪಡೆದಿದ್ದಾರೆ.

D.R.R. EDUCATIONAL TRUST (R.)
**D.R.R. ENGLISH MEDIUM NURSERY, PRIMARY AND HIGH SCHOOL**
P.B. Road, DAVANGERE
**WANTED**
Qualified, Trained, Experienced Teachers with fluency in English

| Sl. No. | Qualification | Subject | No. of Posts |
|---|---|---|---|
| 1 | Kannada Major | M.A/B.A/B.Ed., | 01 |
| 2 | Science/Maths | M.Sc/B.A/B.Ed., | 01 |

Send Your Resume to " Administrative Officer"
D.R.R. School, P.B. Road, Opp : Central Ware House, Davanagere -577003.
Mob : 9845447268, 9972423832, 9591921121
Interview Date 23/09/2023 (10.00 am) Saturday
-Schools Management

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ.
ವರ್ಕಿಂಗ್ ಫಾರ್ಮಾಸಿಸ್ಟ್ ವಿತ್ ಸರ್ಟಿಫಿಕೇಟ್
Mediworld Pharma C/o
AKP Healthcare Pvt. Ltd
Hadadi Road, Opp. Taralabalu school,
Shrinivaasa Nagara, Davanagere, Karnataka 577005
Mob: 96865 52532

**ಬಾಡಿಗೆಗೆ ದೊರೆಯುತ್ತದೆ**
ಬೈಪಾಸ್ ರಸ್ತೆ ಪಕ್ಕದಲ್ಲಿರುವ ಬನಶಂಕರಿ ಬಡಾವಣೆಯಲ್ಲಿ ಮೂರು ಕಡೆ ರಸ್ತೆ ಹಾಗೂ 8150 sft ಖಾಲಿ ಜಾಗದಲ್ಲಿ ಕಟ್ಟಿಸಿರುವ 2200 sft ಕಟ್ಟಡವು ಬಾಡಿಗೆಗೆ ದೊರೆಯುತ್ತದೆ. ಇದರಲ್ಲಿ ಬೇರೆ 02 ವಾಸದ ಕೊಠಡಿಗಳು, 02 ಶೌಚಾಲಯಗಳು ಮತ್ತು 02 ಬೋರ್‌ವೆಲ್‌ಗಳು ಇರುತ್ತವೆ. ಈ ಜಾಗವು ಗೋಡೌನ್‌ಗೆ ಅಥವಾ ಇತರೆ ವಾಣಿಜ್ಯ ಉಪಯೋಗಕ್ಕೆ ಸೂಕ್ತವಾಗಿರುತ್ತದೆ ಮತ್ತು ವಾಸ್ತು ಪ್ರಕಾರ ಕಟ್ಟಲಾಗಿದೆ. ಸಂಪೂರ್ಣ ಜಾಗವು ಕಾಂಪೌಂಡ್ ಗೋಡೆಯಿಂದ ರಕ್ಷಿಸಲ್ಪಟ್ಟಿರುತ್ತದೆ.
ಫೋ. : 99452 98838

**ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ., ನಿಯಮಿತ ದಾವಣಗೆರೆ.**
#1653/51-1 & 1699/4, ಮೊದಲನೇ ಮಹಡಿ, ಬಿಐಇಟಿ ಕಾಲೇಜ್ ಮುಖ್ಯ ರಸ್ತೆ, ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ-04, ದೂರವಾಣಿ : 224408
**10ನೇ ವಾರ್ಷಿಕ ಮಹಾಸಭೆಯ ಆಹ್ವಾನ**
ಸಂಘದ 2022-2023ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ : 16.09.2023ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಎಂ.ಡಿ. ನೀಲಗಿರಿಯಪ್ಪ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ, ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ.
**ಮಾನ್ಯ ಷೇರುದಾರರಿಗೆ ಈಗಾಗಲೇ ಮಹಾಸಭೆಯ ನೋಟಿಸ್‌ಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿ.**
**ವಿಶೇಷ ಸೂಚನೆ : ಷೇರುದಾರರ ವಿಳಾಸ ಬಹುತೇಕ ಬದಲಾವಣೆಗೊಂಡಿದ್ದು, ಸಾಕಷ್ಟು ಆಹ್ವಾನ ಪತ್ರಿಕೆ ವಾಪಾಸ್ ಬಂದಿರುತ್ತದೆ. ಆದಕಾರಣ ಷೇರುದಾರರು ಸಭೆಗೆ ಆಗಮಿಸಿ ತಮ್ಮ ವಿಳಾಸಗಳನ್ನು ಸರಿಪಡಿಸಿ, ತಮ್ಮ Whatsapp ಇರುವ ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಿಕೊಳ್ಳಲು ಕೋರಿದೆ.**

| ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|
| ಶ್ರೀ ಶಿವಯೋಗಿ ಡಿ.ಆರ್. | ಶ್ರೀ ಹೆಚ್.ಎಂ. ರೇವಣಸಿದ್ದಪ್ಪ | ಶ್ರೀ ಎನ್.ಡಿ. ಮಂಜು | ಶ್ರೀ ಎಂ.ಡಿ. ನೀಲಗಿರಿಯಪ್ಪ |
| ಕಾರ್ಯದರ್ಶಿ | ಗೌರವಾಧ್ಯಕ್ಷರು | ಉಪಾಧ್ಯಕ್ಷರು | ಅಧ್ಯಕ್ಷರು |

**ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿ.,**
ನಂ. 1952/18, 7ನೇ ಅಡ್ಡ ರಸ್ತೆ, 15ನೇ ಮುಖ್ಯರಸ್ತೆ, ಕುವೆಂಪು ನಗರ, ಹಳೇ ಆರ್.ಟಿ.ಓ. ಕಛೇರಿ ಹತ್ತಿರ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ. ಫೋ : 08192 220511, ಮೊ. : 95355 64408
**ಮಾನ್ಯ ಸದಸ್ಯರುಗಳ ಗಮನಕ್ಕೆ**
**23ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**
ಸನ್ಮಾನ್ಯ ಸಂಘದ ಸದಸ್ಯರುಗಳೇ, **ದಿನಾಂಕ : 17.09.2023ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ 23ನೇ ವಾರ್ಷಿಕ ಮಹಾಸಭೆಯನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ,** ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ, ದಾವಣಗೆರೆಯಲ್ಲಿ ಆಯೋಜಿಸಲಾಗಿದೆ. ಆದ್ದರಿಂದ ಸಂಘದ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.
ಸಹಿ/-
ಶ್ರೀ ಹೊರಕೇರಿ ಎಂ.ವಿ., ಅಧ್ಯಕ್ಷರು
ವಿ.ಸೂ. : ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ, ಸಭೆಗೆ ಹಾಜರಾಗಬೇಕಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ.

**ದಾವಣಗೆರೆ ಶ್ರೀ ಹಾಲುಮತ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ**
# 76/2ಎ, ಮೊದಲನೇ ಮಹಡಿ, ಎ.ವಿ.ಕೆ. ಕಾಲೇಜು ರಸ್ತೆ, ಶ್ರೀರಾಮ ಪಾರ್ಕ್ ಹತ್ತಿರ, ದಾವಣಗೆರೆ.
**2022-23ನೇ ಸಾಲಿನ ವಾರ್ಷಿಕ ವರದಿ ಮತ್ತು ಮಹಾಸಭೆಯ ಆಹ್ವಾನ ಪತ್ರಿಕೆ**
ದಾವಣಗೆರೆ ಶ್ರೀ ಹಾಲುಮತ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ. ಇದರ 2022-23ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 17-09-2023 ನೇ ಭಾನುವಾರ ಬೆಳಿಗ್ಗೆ 11-30 ಕ್ಕೆ ಶ್ರೀ ಚನ್ನಗಿರಿ ವಿರುಪಾಕ್ಷಪ್ಪ ಧರ್ಮಶಾಲಾ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಎಂ. ಸಿದ್ಧಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.
ಸಹಿ
(ಶ್ರೀಮತಿ ಮಮತ ಎಂ.)
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

Office of the Principal
**University BDT College of Engineering**
(A constituent college of VTU, Belagavi)
Davangere - 577 004. Karnataka.
☎ Off. : 08192-233414, 250716 E-mail : principalubdt@gmail.com
No. : UBDT/ /EST(1)/2023-24/668 Date : 15-09-2023
**REQUIREMENT OF TEMPORARY FACULTY**
Applications are Invited for the post of **Temporary Assistant Professors(Ad-hoc)** in UBDT College of Engineering, Davangere for the Academic year 2023-24. With the above cited subject, Applications are invited from the eligible candidates for the post of Temporary Assistant Professors (Ad-hoc) in Civil, Mechanical, Electrical & Electronics, Electronics & Communication, Computer Science & Engineering, Electronics & Instrumentation and Industrial & Production Engineering, Master of Business Administration and Master of Computer Applications departments in University BDT College of Engineering. Davangere. **The Candidates can apply for the said post on or before 25-09-2023,** Notification, Application format and for other details visit college website www.ubdice.org.
**Sd/- Principal**
University BDT College of Engineering, Davangere-4.

# ಭದ್ರಾ ನಾಲೆಗೆ ಆಫ್-ಆನ್ ಪದ್ಧತಿ

**(1ನೇ ಪುಟದಿಂದ)** 26.10.23ರವರೆಗೆ 15 ದಿನ ನೀರು ಹರಿಸಲಾಗುವುದು.

ದಿನಾಂಕ 27.10.23ರಿಂದ 5.11.23 ರವರೆಗೆ ಮತ್ತೆ 10 ದಿನ ನೀರು ಬಂದ್ ಮಾಡಿ ದಿನಾಂಕ 6.11.23ರಿಂದ 17.11.23ರವರೆಗೆ 12 ದಿನ ನೀರು ಹರಿಸಲಾಗುವುದು. ಈ ಪ್ರಕಾರ ಎಡದಂಡೆ ನಾಲೆಗೆ 30 ದಿನ ನೀರು ಬಂದ್ ಮಾಡಿ 42 ದಿನ ನೀರು ಹರಿಸಲಾಗುವುದು.

**ಆಕ್ರೋಶ:** ದಾವಣಗೆರೆ ಜಿಲ್ಲೆಯ ಜನ ಪ್ರತಿನಿಧಿಗಳು ಹಾಗೂ ರೈತ ಮುಖಂಡರ ಜೊತೆ ಚರ್ಚಿಸದೆ ಏಕಾಏಕಿ ಭದ್ರಾ ಜಲಾಶಯದಿಂದ ನಾಲೆಗೆ ಹರಿಸುವ ನೀರನ್ನು ಆಫ್ ಅಂಡ್ ಆನ್ ಪದ್ಧತಿಯಲ್ಲಿ ಹರಿಸುವ ತೀರ್ಮಾನವನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದು ಶಾಸಕ ಬಿ.ಪಿ. ಹರೀಶ್ ಜನತಾವಾಣಿಗೆ ತಿಳಿಸಿದ್ದಾರೆ.

ಈ ಅವೈಜ್ಞಾನಿಕ ತೀರ್ಮಾನ ಕುರಿತು ಶನಿವಾರ ಜಿಲ್ಲಾ ಸಚಿವರು, ಸಂಸದರು, ಶಾಸಕರು ಹಾಗೂ ರೈತರೊಂದಿಗೆ ಚರ್ಚಿಸಿ, ನಮ್ಮ ಮುಂದಿನ ತೀರ್ಮಾನ ಪ್ರಕಟಿಸುತ್ತೇವೆ ಎಂದು ಹರೀಶ್ ಹೇಳಿದರು.

**ತೀರ್ಮಾನ ಪುನರ್ ಪರಿಶೀಲನೆಗೆ ಆಗ್ರಹ:** ಭದ್ರಾ ನಾಲೆಗಳಲ್ಲಿ 100 ದಿನ ಸತತವಾಗಿ ನೀರು ಹರಿಸುತ್ತೇವೆ ಎಂಬ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಅಚ್ಚುಕಟ್ಟಿನ ರೈತರು ಭತ್ತದ ನಾಟಿ ಮಾಡಿದ್ದಾರೆ. ಈಗ ದಿಢೀರನೆ ನಾಲೆಯಲ್ಲಿ 10 ದಿನ ನೀರು ಬಂದ್ ಮಾಡುವ ತೀರ್ಮಾನ ಮಾಡಿರುವುದರಿಂದ ಭತ್ತ ನಾಟಿ ಮಾಡಿದ ರೈತರಿಗೆ ಬಹಳ ತೊಂದರೆ ಆಗುತ್ತದೆ ಎಂದು ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ.ದ್ಯಾವಪ್ಪ ರೆಡ್ಡಿ ಹೇಳಿದ್ದಾರೆ.

> **ಭದ್ರಾ ಐಸಿಸಿಯ ತೀರ್ಮಾನ ಏಕಪಕ್ಷೀಯ ಮತ್ತು ಅವೈಜ್ಞಾನಿಕವಾಗಿದ್ದು, ಇದನ್ನು ತೀವ್ರವಾಗಿ ಖಂಡಿಸುತ್ತೇವೆ.**
>
> **- ಶಾಸಕ ಬಿ.ಪಿ. ಹರೀಶ್, ವೈ. ದ್ಯಾವಪ್ಪ ರೆಡ್ಡಿ**

**ತೀರ್ಮಾನ ಪುನರ್ ಪರಿಶೀಲನೆಗೆ ಆಗ್ರಹ :** ಭದ್ರಾ ನಾಲೆಗಳಲ್ಲಿ 100 ದಿನ ಸತತವಾಗಿ ನೀರು ಹರಿಸುತ್ತೇವೆ ಎಂಬ ಸರ್ಕಾರದ ಆದೇಶದ ಹಿನ್ನೆಲೆಯಲ್ಲಿ ಅಚ್ಚುಕಟ್ಟಿನ ರೈತರು ಭತ್ತದ ನಾಟಿ ಮಾಡಿದ್ದಾರೆ. ಈಗ ದಿಢೀರ್‌ನೆ ನಾಲೆಯಲ್ಲಿ 10 ದಿವಸ ನೀರು ಬಂದ್ ಮಾಡುವ ತೀರ್ಮಾನ ಮಾಡಿರುವುದರಿಂದ ಭತ್ತ ನಾಟಿ ಮಾಡಿದ ರೈತರಿಗೆ ಬಹಳ ತೊಂದರೆ ಆಗುತ್ತದೆ ಎಂದು ಭದ್ರಾ ಅಚ್ಚುಕಟ್ಟು ವ್ಯಾಪ್ತಿ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ಹೇಳಿದ್ದಾರೆ.

'ಜನತಾವಾಣಿ'ಯೊಂದಿಗೆ ಮಾತನಾಡಿದ ಅವರು, ಭದ್ರಾ ಅಧೀಕ್ಷಕ ಇಂಜಿನಿಯರ್ ಅವರು ಶುಕ್ರವಾರ ಬಿಡುಗಡೆ ಮಾಡಿರುವ ಪತ್ರಿಕಾ ಪ್ರಕಟಣೆಯಲ್ಲಿ ದಿನಾಂಕ 06-09-2023 ರಂದು ನಡೆದ ಭದ್ರಾ ಐಸಿಸಿ ಸಭೆಯ ತೀರ್ಮಾನದಂತೆ ಆಫ್ ಅಂಡ್ ಆನ್ ಪದ್ಧತಿಯಲ್ಲಿ ನೀರು ಹರಿಸಲಾಗುವುದೆಂದು ಹೇಳಿದ್ದಾರೆ.

ಅವತ್ತಿನ ಸಭೆಯಲ್ಲಿ ನಾವು ಕೂಡಾ ಇದ್ದೆವು. ಈ ರೀತಿಯ ಯಾವುದೇ ತೀರ್ಮಾನ ಅಂದಿನ ಸಭೆಯಲ್ಲಿ ಆಗಿಲ್ಲ, ನೀರಾವರಿ ಸಚಿವರ ಜೊತೆ ಚರ್ಚಿಸಿ, ತೀರ್ಮಾನ ಮಾಡುತ್ತೇವೆ ಎಂದು ಸಚಿವ ಮಧು ಬಂಗಾರಪ್ಪ ಹೇಳಿದ್ದರು.

ಆದರೀಗ ಏಕಾಏಕಿ ಈ ತೀರ್ಮಾನ ಕೈಗೊಂಡಿರುವುದು ಏಕ ಪಕ್ಷೀಯ ಹಾಗೂ ಅವೈಜ್ಞಾನಿಕ ವಾಗಿದ್ದು, ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಮತ್ತು ಈ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ವೈ. ದ್ಯಾವಪ್ಪರೆಡ್ಡಿ ಆಗ್ರಹಿಸಿದ್ದಾರೆ.

ಜಲಾಶಯದಲ್ಲಿ ನೀರು ಕಡಿಮೆ ಇರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈಗಿನ ತೀರ್ಮಾನದಂತೆ ಬಲ ಮತ್ತು ಎಡದಂಡೆ ನಾಲೆಗಳಲ್ಲಿ 20 ದಿವಸ ನೀರು ಬಂದ್ ಮಾಡುವುದರಿಂದ ಸುಮಾರು 60 ಸಾವಿರ ಕ್ಯೂಸೆಕ್ಸ್ ನೀರನ್ನು ಉಳಿಸಬಹುದು. ಆದರೆ ಇದರಿಂದ ಭತ್ತದ ನಾಟಿ ಮಾಡಿರುವ ರೈತರಿಗೆ ಬಹಳ ತೊಂದರೆ ಆಗುತ್ತದೆ.

ಆದ್ದರಿಂದ ಬಲದಂಡೆ ನಾಲೆಗೆ 20 ದಿವಸ ನೀರು ಬಂದ್ ಮಾಡುವ ಬದಲಾಗಿ ಜಲಾಶಯದಿಂದ ನಾಲೆಗೆ ಬಿಡುಗಡೆ ಮಾಡುವ ನೀರಿನ ಪ್ರಮಾಣವನ್ನು 2650 ಕ್ಯೂಸೆಕ್ಸ್ ಬದಲಾಗಿ 2 ಸಾವಿರ ಕ್ಯೂಸೆಕ್ಸ್ ನೀರು ಹರಿಸುವ ತೀರ್ಮಾನ ಮಾಡಬೇಕು. ಇದರಿಂದ 48,750 ಕ್ಯೂಸೆಕ್ಸ್ ನೀರು ಉಳಿತಾಯವಾಗುತ್ತದೆ.

